ಸಂಪುಟ 01 | ಸಂಚಿಕೆ 40 | ಭಾನುವಾರ 21 ಡಿಸೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1. ವಿಶ್ವ ಸಾರಿ ದಿನ World Saree Day**

ಈ ದಿನವು ಸಾರಿಯನ್ನು (Saree) ವಿಶ್ವಾದ್ಯಾಂತ ಸಾಂಸ್ಕೃತಿಕ ಹಾಗೂ ಪರಂಪರೆಯಕವಾಗಿ ಗೌರವಿಸುವುದು.ಸಾರಿ ಭಾರತದ ಸಂಪ್ರದಾಯಿಕ ಉಡುಪುಗಳಲ್ಲೊಂದು ಶಿಲ್ಪಕಲೆ, ಇತಿಹಾಸ ಮತ್ತು ವಿವಿಧ ಪ್ರದೇಶಗಳ ವೈವಿಧ್ಯತೆಯನ್ನು ಪ್ರತಿಬಿಂಬಿಸುತ್ತದೆ.ಸಾರಿ ಧರಿಸುವ ಮೂಲಕ, ಜನರು ತನ್ನ ಪರಂಪರೆ ಮತ್ತು ಸೌಂದರ್ಯವನ್ನು ಜಗತ್ತಿನ ಮುಂದೆ ಪ್ರದರ್ಶಿಸುತ್ತಾರೆ.

**2. ಶೀತ ಋತು ಕ್ಷಿತಿಜ Winter Solstice**

ಈ ದಿನವು ಉತ್ತರಾರ್ಧ ಗರ್ಭದಲ್ಲಿ ವರ್ಷದಲ್ಲಿನ ಕೊಡುಗೆ ಅಬ್ಬರ ದಿನ ಆಗಿದೆ ಅತಿ ಲಘು ದಿನ ಮತ್ತು ಅತಿ ದೀರ್ಘ ರಾತ್ರಿ ಆಗುತ್ತದೆ. ಸೌರಚಕ್ರದ ನಿಧಾನ ಕೂದಲು ಕಾರಣದಿಂದ ಎರ್ಥಿನ ತಿರುಗುಮುಖವು ಸೂರ್ಯನಿಂದ ದೂರವಾದ ದಿನ.ಅನೇಕ ಸಂಸ್ಕೃತಿಗಳು ಈ ದಿನವನ್ನು ಶೈತ್ಯದ ಆರಂಭ ಅಥವಾ ಹೊಸ ಚಕ್ರದ ಆರಂಭವೆಂದು ಗುರುತಿಸುತ್ತವೆ. ಚೀನಾ ಸೇರಿದಂತೆ ಹಲವೆಡೆ ಆಂಟಿರಿದ್ಧು Festival ಎಂಬ ಶೀತಕುಂಡ ಹಬ್ಬವೂ ಇಂದಿನ ಸಮೀಪದ ದಿನಗಳಲ್ಲಿ ಆಚರಿಸಲಾಗುತ್ತದೆ ಕುಟುಂಬದ ಒಕ್ಕೂಟ, ತಂಗ್‌ಯುಅನ್ ಆಹಾರ ಮತ್ತು ಪೂಜೆ-ಪರಂಪರೆಗಾಗಿ.

## ಸುಭಾಷಿತ

ನಕಾರಾತ್ಮಕ ಧೋರಣೆಯ ಜನರಿಂದ
ದೂರವಿರಿ. ಪ್ರತೀ ಪರಿಹಾರಕ್ಕೂ ಅವರ
ಬಳಿ ತಕರಾರು ಇರುತ್ತದೆ.

-ಐನ್‌ಸ್ಟೀನ್

# ಸರ್ಕಾರಿ ನೌಕರರಿಗೆ 'ಡ್ರೆಸ್ ಕೋಡ್' ಬಿಸಿ:
## ಕಚೇರಿ ವೇಳೆ ಓಡಾಟಕ್ಕೆ ಬ್ರೇಕ್, ನಗದು ಘೋಷಣೆ ಕಡ್ಡಾಯ

**ಬೆಂಗಳೂರು: r.20 www.bengaluru-wire.com : ರಾಜ್ಯ ಸರ್ಕಾರದ ಕಚೇರಿಗಳಲ್ಲಿ ಶಿಸ್ತು ಕಾಪಾಡುವ ನಿಟ್ಟಿನಲ್ಲಿ ಸರ್ಕಾರ ಮತ್ತೊಮ್ಮೆ ಚಾಟಿ ಬೀಸಿದೆ. ಸರ್ಕಾರಿ ನೌಕರರು ಕಚೇರಿ ಸಮಯದಲ್ಲಿ ಅನಗತ್ಯವಾಗಿ ಓಡಾಡುವುದಕ್ಕೆ ಕಡಿವಾಣ ಹಾಕಲು ಮತ್ತು ಕಚೇರಿಯ ಘನತೆಗೆ ತಕ್ಕಂತಹ ಉಡುಗೆ ತೊಡುಗೆ ಧರಿಸುವುದನ್ನು ಕಡ್ಡಾಯಗೊಳಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (DPAR) ಡಿ.18 ರಂದು ಸುತ್ತೋಲೆ [ಸಿಆಸುಇ(ಆಸು)/196 ಕಡವ 2025] ಹೊರಡಿಸಿದೆ.**

ಸಾರ್ವಜನಿಕರು ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಸರ್ಕಾರಿ ನೌಕರರ ವರ್ತನೆ, ವಸ್ತ್ರಸಂಹಿತೆ ಪಾಲನೆ ಮತ್ತು ರಿಜಿಸ್ಟರ್ ನಿರ್ವಹಣೆ ಕುರಿತು ದೂರುಗಳು ಬಂದ ಹಿನ್ನೆಲೆಯಲ್ಲಿ ಸರ್ಕಾರ ಈ ಕ್ರಮಕ್ಕೆ ಮುಂದಾಗಿದೆ. ಈ ಹಿಂದೆ ಹಲವು ಬಾರಿ ಸೂಚನೆ ನೀಡಿದ್ದರೂ ಪಾಲನೆಯಾಗದ ಕಾರಣ, ಈ ಬಾರಿ ನಿಯಮ ಉಲ್ಲಂಘಿಸುವವರ ವಿರುದ್ಧ ಶಿಸ್ತುಕ್ರಮದ ಎಚ್ಚರಿಕೆ ನೀಡಲಾಗಿದೆ.

1. ಬೆಳಗ್ಗೆ 10.10ಕ್ಕೆ ಹಾಜರಾತಿ ಕಡ್ಡಾಯ: ಸರ್ಕಾರಿ ಕಚೇರಿಗಳ ನಿಗದಿತ ಸಮಯ ಬೆಳಗ್ಗೆ 10.10 ಗಂಟೆ. ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಈ ಸಮಯಕ್ಕೆ ಸರಿಯಾಗಿ ಕಚೇರಿಗೆ ಹಾಜರಾಗಬೇಕು



ಹಾಗೂ ಕಚೇರಿ ಸಮಯ ಮುಗಿಯುವವರೆಗೂ ತಮ್ಮ ಕರ್ತವ್ಯದ ಸ್ಥಳದಲ್ಲಿಯೇ ಇರಬೇಕು ಎಂದು ಸುತ್ತೋಲೆಯಲ್ಲಿ ಸ್ಪಷ್ಟಪಡಿಸಲಾಗಿದೆ.

2. ಚಲನವಲನ ವಹಿ (Movement Register) ನಿರ್ವಹಣೆ: ಕಚೇರಿ ಸಮಯದಲ್ಲಿ ನೌಕರರು ಸೀಟಿನಿಂದ ನಾಪತ್ತೆಯಾಗುವುದನ್ನು ತಡೆಯಲು 'ಚಲನವಲನ ವಹಿ'ಯನ್ನು ಕಡ್ಡಾಯವಾಗಿ ನಿರ್ವಹಿಸಲು ಸೂಚಿಸಲಾಗಿದೆ.

*ಅಧಿಕೃತ ಕೆಲಸಕ್ಕಾಗಿ ಹೊರಗೆ ಹೋಗುವುದಿದ್ದರೆ, ವಹಿಯಲ್ಲಿ ಕಾರಣ ಮತ್ತು ಉದ್ದೇಶವನ್ನು ನಮೂದಿಸಬೇಕು.

*ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯಲೇಬೇಕು.

*ಹೊರಗೆ ಹೋದ ಸಮಯ ಮತ್ತು ಹಿಂದಿರುಗಿದ ಸಮಯವನ್ನು ಸಹಿಯೊಂದಿಗೆ ದಾಖಲಿಸಬೇಕು.

* ಒಂದು ವೇಳೆ ವಹಿಯಲ್ಲಿ ದಾಖಲಿಸದೆ ಕಚೇರಿಯಲ್ಲಿ ಇಲ್ಲದಿದ್ದರೆ, ಅಂತಹ ನೌಕರರನ್ನು 'ಅನಧಿಕೃತ ಗೈರು ಹಾಜರಿ' ಎಂದು ಪರಿಗಣಿಸಿ ಮೇಲಾಧಿಕಾರಿಗಳು ಕ್ರಮ ಕೈಗೊಳ್ಳಲಿದ್ದಾರೆ.

3.ನಗದು ಘೋಷಣೆ (Cash Declaration) ಮರೆಯುವಂತಿಲ್ಲ: ಅಧಿಕಾರಿಗಳು ಅಥವಾ ನೌಕರರು ಕಚೇರಿಗೆ ಬಂದು ಹಾಜರಾತಿ ವಹಿಗೆ (ಅಥವಾ ಬಯೋಮೆಟ್ರಿಕ್) ಸಹಿ ಹಾಕಿದ ತಕ್ಷಣ, ತಮ್ಮ ಬಳಿ ಇರುವ ನಗದು ಹಣವೆಷ್ಟು ಎಂಬುದನ್ನು 'ನಗದು ಘೋಷಣೆ ವಹಿ'ಯಲ್ಲಿ ನಮೂದಿಸಿ ಸಹಿ ಮಾಡಬೇಕು. ಸಿಬ್ಬಂದಿಗಳು ಇದನ್ನು ಪಾಲಿಸುತ್ತಿದ್ದಾರೆಯೇ ಎಂದು ಮೇಲಾಧಿಕಾರಿಗಳು ಆಗಿಂದಾಗ್ಗೆ ಪರಿಶೀಲನೆ ನಡೆಸಬೇಕು ಎಂದು ನಿರ್ದೇಶಿಸಲಾಗಿದೆ.

4.ಸಭ್ಯ ಉಡುಗೆ-ತೊಡುಗೆ (Dress Code): ಸರ್ಕಾರಿ ನೌಕರರು ಕಚೇರಿಯ ಘನತೆಗೆ ಧಕ್ಕೆ ಬಾರದಂತೆ ಮತ್ತು ಶೋಭೆ ತರುವಂತಹ ಸಭ್ಯ ಉಡುಗೆಗಳನ್ನು ಮಾತ್ರ ಧರಿಸಬೇಕು. ಜೀನ್ಸ್, ಟೀ-ಶರ್ಟ್ ನಂತಹ ಕ್ಯಾಶುವಲ್ ಉಡುಪುಗಳ ಬದಲಿಗೆ ಮಾನ್ಯತೆ ಪಡೆದ ವಸ್ತ್ರಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸರ್ಕಾರ ತಾಕೀತು ಮಾಡಿದೆ. ಈ ನಿಯಮಗಳನ್ನು ಎಲ್ಲಾ ಇಲಾಖಾ ಮುಖ್ಯಸ್ಥರು, ಜಿಲ್ಲಾಧಿಕಾರಿಗಳು ಮತ್ತು ಜಿ.ಪಂ ಸಿಇಒಗಳು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸರ್ಕಾರದ ಅಧೀನ ಕಾರ್ಯದರ್ಶಿ ವಿಮಲಾಕ್ಷಿ ಬಿ. ಅವರು ಆದೇಶಿಸಿದ್ದಾರೆ.

# ರಾಮಕ್ಕಮ್ಮ ದೇವಿ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ದೀಪೋತ್ಸವ

❏ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕಿನ ಹಿರೇಕೋಟ್ನೆಕಲ್ ,ಭೋಗವಾತಿ ಅವಳಿ ಗ್ರಾಮದಲ್ಲಿನ ರಾಮಕ್ಕಮ್ಮ ದೇವಿ ದೇವಸ್ಥಾನದ ಆವರಣದಲ್ಲಿ ನಡೆದ ಕಾರ್ತಿಕ ಮಾಸದ ದೀಪೋತ್ಸವ ಹಾಗೂ ಪ್ರವಚನ ಕಾರ್ಯಕ್ರಮದಲ್ಲಿ ಮಾಜಿ ಸಂಸದ ಬಿ.ವಿ.ನಾಯಕ ಮಾತನಾಡಿ ಗ್ರಾಮದ ಆರಾಧ್ಯ ಶಕ್ತಿ ದೇವತೆಯಾಗಿರುವ ರಾಮಕ್ಕಮ್ಮ ದೇವಿಯು ಅನೇಕ ವರ್ಷಗಳಿಂದ ಭಕ್ತರಿಗೆ ಅನುಗ್ರಹವನ್ನು ನೀಡುತ್ತ ಬಂದಿರುವ ಶಕ್ತಿ ದೇವತೆಯ ದೇವಸ್ಥಾನದ ಜೀರ್ಣೋದರಕ್ಕೆ ಗ್ರಾಮದ ಭಕ್ತರು ಮುಂದಾಗಿದ್ದು ನನ್ನಿಂದಾಗುವ ಸಹಕಾರವನ್ನು ನೀಡುವುದಾಗಿ ಬರವಸೇ ನೀಡಿದರು.**



ಅಡವಿ ಅಮರೇಶ್ವರ ಮಠದ ಶ್ರೀ ತೋಂಟದಾರ್ಯ ಮಹಾಸ್ವಾಮಿಗಳು ದಿವ್ಯಸಾನಿಧ್ಯವನ್ನು ವಹಿಸಿ ಆರ್ಶಿವಾಚನ ನೀಡಿ ಅಧ್ಯಾತ್ಮಿಕ ಪ್ರವಚನವನ್ನು ಅಲಿಸುವುದರಿಂದ ಪುಣ್ಯ ಪ್ರಾಪ್ತಿಯಾಗುವುದರ ಜೋತೆಗೆ ಮಕ್ಕಳಲ್ಲಿನ ಶರಣರ, ಸಂತರ, ಮಹಾಯೋಗಿಗಳ ಅದರ್ಶ ಜೀವನ ಹಾಗೂ ಅವರ ತತ್ವಗಳ ಬಗ್ಗೆ ತಿಳಿಯುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಶ್ರೀ ರುದ್ರಯ್ಯಶಾಸ್ತ್ರಿಗಳು ರಾಮಕ್ಕಮ್ಮ ದೇವಿ ಕುರಿತು ಅಧ್ಯಾತ್ಮಿಕ ಪ್ರವಚನ ನೀಡಿದರು. ಸಂಜೆ ಕಾರ್ತಿಕ ದೀಪೋತ್ಸವ ನಡೆಯಿತು. ಮಾನ್ವಿ ಬಿಜೆಪಿ ಮಂಡಲ ಅಧ್ಯಕ್ಷರಾದ ವೀರಭದ್ರಗೌಡ ಭೋಗವತಿ, ಮುಖಂಡರಾದ ತಿಮ್ಮರೆಡ್ಡಿ ಭೋಗವತಿ, ಅ.ಭಾ.ವೀ.ಲಿಂ. ಮಹಾಸಭಾ ತಾಲೂಕು ಅಧ್ಯಕ್ಷರಾದ ಅರುಣಚಂದಾ , ಜಗದೀಶ ಒತ್ತೂರು, ಉಮೇಶ ಸಜ್ಜನ, ಶಂಭನಗೌಡ,ವಿಜಯಕುಮಾರ ಮೇಟಿ,ಚನ್ನಬಸವ ಸುಗನೂರು ಸೇರಿದಂತೆ ಇನ್ನಿತರರು ಇದ್ದರು.

# ವಿಕಲಚೇತನರು ಕೀಳುರಿಮೆಗೆ ಒಳಗಾಗುವುದು ಬೇಡ: ನ್ಯಾಯಾಧೀಶ ರಾಮಮೂರ್ತಿ



❏ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಅಂಗವೈಕಲ್ಯ ಎಂಬುದು ಶಾಪವೂ ಅಲ್ಲ, ಪಾಪದ ಫಲವೂ ಅಲ್ಲ. ಅದು ಹುಟ್ಟಿನಿಂದ,ವೈಜ್ಞಾನಿಕ ಕಾರಣಗಳಿಂದ ಅಥವಾ ಬದುಕಿನಲ್ಲಿ ನಡೆಯುವ ಆಕಸ್ಮಿಕ ಘಟನೆಗಳಿಂದ ಸಂಭವಿಸಿರುತ್ತದೆ, ಆದರೆ ಸಮಾಜ ಇದನ್ನು ಶಾಪದ ದೃಷ್ಟಿಯಲ್ಲಿ ನೋಡುವುದು ಅಥವಾ ಕೀಳಾಗಿ ಕಾಣುವುದು ಸರಿಯಲ್ಲ ಎಂದು ಸಿವಿಲ್ ನ್ಯಾಯಾಧೀಶ ಹಾಗೂ ಮುದ್ದೇಬಿಹಾಳ ತಾಲೂಕ ಕಾನೂನು ಸೇವೆಗಳ ಸಮಿತಿ ಸದಸ್ಯ ಕಾರ್ಯದರ್ಶಿ ರಾಮಮೂರ್ತಿ ಎನ್. ಹೇಳಿದರು.**

ತಾಲೂಕು ಕಾನೂನು ಸೇವೆಗಳ ಸಮಿತಿ, ನ್ಯಾಯವಾದಿಗಳ ಸಂಘ ಮುದ್ದೇಬಿಹಾಳ, ತಾಲೂಕು ಪಂಚಾಯತ್ ಹಾಗು ಇತರ ಎಲ್ಲ ಸರಕಾರಿ ಇಲಾಖೆಗಳು ತಾಳಿಕೋಟಿ ಇವರ ಸಂಯುಕ್ತ ಆಶ್ರಯದಲ್ಲಿ ಶನಿವಾರ ತಾಪಂ ಸಭಾಭವನದಲ್ಲಿ ಹಮ್ಮಿಕೊಂಡ ವಿಕಲಚೇತನರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮ ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಅವಕಾಶ ಮತ್ತು ಹಕ್ಕುಗಳನ್ನು ನೀಡಲಾಗಿದೆ ಇದಕ್ಕೆ ವಿಶೇಷ ಚೇತನರೂ ಹೊರತಾಗಿಲ್ಲ, ಸರ್ಕಾರದ ವಿವಿಧ ಇಲಾಖೆ ಹುದ್ದೆಗಳ ನೇಮಕಾತಿಯಲ್ಲಿ ಅವರಿಗೆ ವಿಶೇಷ ಮೀಸಲಾತಿ ಒದಗಿಸಲಾಗಿದೆ ಅದನ್ನು ಅವರು ಪಡೆದುಕೊಳ್ಳಲು ಪ್ರಯತ್ನಿಸಬೇಕು. ಈ ಕುರಿತು ಅವರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ ಇದಾಗಿದೆ ಎಂದರು.

ತಹಸಿಲ್ದಾರ್ ಡಾ.ವಿನಯಾ ಹೂಗಾರ ಮಾತನಾಡಿ ವಿಕಲ ಚೇತನರಿಗೆ ಕೇವಲ ಅನುಕಂಪ ತೋರಿದರೆ ಸಾಲದು ಅವರಲ್ಲಿ ಆತ್ಮಸ್ಥೈರ್ಯ ತುಂಬುವುದರ ಜೊತೆಗೆ ಅವರಿಗೆ ಶಿಕ್ಷಣ ಉದ್ಯೋಗ ಮತ್ತು ಗೌರವಯುತ ಜೀವನ ಒದಗಿಸುವುದು ಸಮಾಜದ ನೈತಿಕ ಹೊಣೆಗಾರಿಕೆ ಯಾಗಿದೆ. ನಮ್ಮ ಸಮಾಜದಲ್ಲಿ ವಿಕಲಚೇತನ ಯುವಕರ ದೊಡ್ಡ ಸಂಖ್ಯೆ ಇದೆ ಅವರಲ್ಲಿ ಬದುಕಿನ ಭರವಸೆ ಮೂಡಿಸಿ ಮುಖ್ಯ ವಾಹಿನಿಗೆ ತರುವ ಕಾರ್ಯವಾಗಬೇಕಾಗಿದೆ. ವಿಕಲಚೇತನರೂ ಕೀಳುರಿಮೆಯಿಂದ ಹೊರ ಬಂದು ಆತ್ಮಸ್ಥೈರ್ಯ ಬೆಳೆಸಿಕೊಂಡು ಅವಕಾಶಗಳನ್ನು ಸದುಪಯೋಗ ಮಾಡಿಕೊಳ್ಳಬೇಕು. ತಾಲೂಕ ಆಡಳಿತವು ಇದಕ್ಕಾಗಿಯೇ ಕುಂದು ಕೊರತೆಗಳ ಸಭೆಗಳನ್ನು ನಡೆಸುತ್ತಿದ್ದು ವಿಶೇಷ ಚೇತನರು ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದರು.

ಮುದ್ದೇಬಿಹಾಳ ನ್ಯಾವಾದಿಗಳ ಸಂಘದ ಅಧ್ಯಕ್ಷ ಶಶಿಕಾಂತ್ ಮಾಲಗತ್ತಿ, ಎಂ ಆರ್ ಡಬ್ಲ್ಯೂ ತಾಲೂಕ ಪಂಚಾಯತ್ ಎಸ್.ಕೆ.ಘಾಟಿ ಮಾತನಾಡಿದರು. ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಅನಸೂಯಾ ಚಲವಾದಿ ಅಧ್ಯಕ್ಷತೆ ವಹಿಸಿ ಮಾತನಾಡಿ ಸರ್ಕಾರದಿಂದ ವಿಕಲಚೇತನರಿಗಾಗಿ ಅನೇಕ ಯೋಜನೆಗಳನ್ನು ಜಾರಿಗೆ ತರಲಾಗಿದೆ ಯೋಜನೆಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು. ವಿಕಲಚೇತನರ ಹಕ್ಕುಗಳು ಘನತೆ ಮತ್ತು ಯೋಗಕ್ಷೇಮದ ಬಗ್ಗೆ ಅರಿವು ಮೂಡಿಸಲು ಇಂತಹ ಕಾರ್ಯಕ್ರಮಗಳ ಅಗತ್ಯವಿದೆ ಎಂದರು. ಕಾರ್ಯಕ್ರಮದಲ್ಲಿ ಮುದ್ದೇಬಿಹಾಳ ತಾಲೂಕು ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಸ್ಥೆ, ಅಧ್ಯಕ್ಷ ಸಂಗಣ್ಣ ಹುಣಶ್ಯಾಳ, ತಾಲೂಕ ಅಂಗವಿಕಲರ ಒಕ್ಕೂಟದ ಅಧ್ಯಕ್ಷ ಎ.ಪಿ.ಕೊಡಗಾನೂರ,ಎ.ಡಿ.ಪಿ. ಆರ್. ಬಿ.ಎಂ.ಸಾಗರ, ಸಹಾಯಕ ಲೆಕ್ಕಾಧಿಕಾರಿ ಬಸನಗೌಡ ಚೌದ್ರಿ,ಎ.ಡಿ.ನರೇಗಾ ಪಿ.ಎಸ್. ಕಸನಕ್ಕಿ, ಮಹಾಂತಗೌಡ ದೊರೆಗೋಳ ಹಾಗೂ ತಾಪಂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಪೋತ್ನಾಳ ಗ್ರಾಮದಲ್ಲಿ ಲಸಿಕೆ ಕುರಿತು ಜಾಗೃತಿ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ತಪ್ಪದೇ ಪೋಲಿಯೋ ಲಸಿಕೆ ಹಾಕಿಸಿ-ಮುಖ್ಯ ಶಿಕ್ಷಕ ಗುಂಡಯ್ಯ ನಾಯಕ

❏ ನೈಜ್ಯ ದೆಸೆ ನ್ಯೂಸ್

**ಮಾನ್ವಿ : ಪಲ್ಸ್ ಪೋಲಿಯೊ ಲಸಿಕೆ ಅಭಿಯಾನದಡಿ ಡಿ.21 ರಿಂದ 24ರವರೆಗೆ 5 ವರ್ಷದೊಳಗಿನ ಎಲ್ಲ ಮಕ್ಕಳಿಗೆ ತಪ್ಪದೇ ಪೋಲಿಯೊ ಲಸಿಕೆ ಹಾಕಿಸಬೇಕೆಂದು ಎಂದು ಶಾಲೆಯ ಮುಖ್ಯ ಶಿಕ್ಷಕ ಗುಂಡಯ್ಯ ನಾಯಕ ಅವರು ತಿಳಿಸಿದರು.**

ಅವರಿಂದು ತಾಲೂಕಿನ ಪೋತ್ನಾಳ ಗ್ರಾಮದ ಜನತಾ ಕಾಲೊನಿ



ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ 5 ವರ್ಷದೊಳಗಿನ ಮಕ್ಕಳಿಗೆ ಲಸಿಕೆ ಜಾಗೃತಿ ಕುರಿತು ಮಾತನಾಡಿದರು. ಪ್ರಸಕ್ತ ಸಾಲಿನ ಪಲ್ಸ್ ಪೋಲಿಯೊ ಲಸಿಕಾ ಅಭಿಯಾನ ಯಶಸ್ವಿಗೊಳಿಸುವ ನಿಟ್ಟಿನಲ್ಲಿ ನಿಯೋಜನಗೊಂಡ ವೈದ್ಯರು, ಆರೋಗ್ಯ ಇಲಾಖೆ ಸಿಬ್ಬಂದಿ, ಅಂಗನವಾಡಿ, ಆಶಾ ಕಾರ್ಯಕರ್ತೆಯರು ತಮಗೆ ವಹಿಸಿದ ಕೆಲಸ ಅಚ್ಚುಕಟ್ಟಾಗಿ ನಿರ್ವಹಿಸುವಂತೆ ಸೂಚಿಸಿದರು.

ಲಸಿಕೆ ಜಾಗೃತಿ: ಗ್ರಾಮದ ವಿವಿಧ ಪ್ರದೇಶ ದಲ್ಲಿ ತಮ್ಮ ವ್ಯಾಪ್ತಿಯಲ್ಲಿನ 5 ವರ್ಷದೊ ಳಗಿನ ಎಲ್ಲಾ ಮಕ್ಕಳಿಗೆ ಎರಡು ಹನಿ ಪೋಲಿಯೊ ಲಸಿಕೆ ಹಾಕಿಸುವ ಕುರಿತು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು. ಈ ಸಂದರ್ಭದಲ್ಲಿ ಸಹ ಶಿಕ್ಷಕಿ ಎಂ, ಗೀತಾ,ಛಾಯರಾಣಿ, ಅತಿಥಿ ಶಿಕ್ಷಕಿಂರಾದ ರೇಖಾ, ಗಂಗಮ್ಮ,ಅಂಗನವಾಡಿ ಟೀಚರ್ ಲಕ್ಷ್ಮೀ , ಆಶಾಕಾರ್ಯಕರ್ತೆ ಸೇರಿದಂತೆ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಎಡಿಸಿ ಸೂಚನೆ ಪ್ರತಿ ಮಗುವಿಗೂ ಪಲ್ಸ್ ಪೊಲಿಯೊ ಲಸಿಕೆ ಸಿಗಬೇಕು

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 20 (ಕರ್ನಾಟಕ ವಾರ್ತೆ): ಜಿಲ್ಲೆಯಲ್ಲಿ ಡಿಸೆಂಬರ್ 21ರಿಂದ ಡಿಸೆಂಬರ್ 24ರವರೆಗೆ ನಿಗದಿಯಾದ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನವನ್ನು ಯಾವುದೇ ಮಗು ಲಸಿಕೆಯಿಂದ ವಂಚಿತವಾಗದಂತೆ ಶಿಸ್ತುಬದ್ಧವಾಗಿ ನಡೆಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಹೇಳಿದರು.**

ಡಿಸೆಂಬರ್ 20ರ ಶನಿವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಎರಡನೇ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಲು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ 1132 ಕೇಂದ್ರಗಳನ್ನು ತೆರೆಯಲಾಗಿದ್ದು, ಸುಮಾರು 2,59,984 ಮಕ್ಕಳಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದೆ. ಜಿಲ್ಲೆಯಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು



ಯಶಸ್ವಿಗೊಳಿಸಲು ಸಂಘ ಸಂಸ್ಥೆಗಳು ವಿವಿಧ ಇಲಾಖೆಗಳ ಸಹಕಾರ ಅಗತ್ಯವಿರುವದರಿಂದ ಎಲ್ಲರೂ ಆರೋಗ್ಯ ಇಲಾಖೆಗೆ ಸಹಕಾರ ನೀಡಬೇಕು ಎಂದರು.

ಪೋಲಿಯೋ ಲಸಿಕಾ ಅಭಿಯಾನಕ್ಕೆ ನಿಯೋಜನೆಗೊಂಡ ವೈದ್ಯರು, ಆರೋಗ್ಯ ಇಲಾಖೆ ಸಿಬ್ಬಂದಿ, ಅಂಗನವಾಡಿ ಆಶಾ ಕಾರ್ಯಕರ್ತೆಯರು ತಮಗೆ ವಹಿಸಿದ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು. ಡಿ.21ರಿಂದ ಗೊತ್ತುಪಡಿಸಿರುವ ಲಸಿಕಾ ಕೇಂದ್ರಗಳಲ್ಲಿ 5 ವರ್ಷದ ಮಕ್ಕಳಿಗೆ ಪಲ್ಸ್ ಪೋಲಿಯೋ ಲಸಿಕೆಯನ್ನು ನೀಡಲು ಕ್ರಮವಹಿಸಬೇಕು. ಮನೆಮನೆ ಭೇಟಿ ಮೂಲಕವು ಸಹ ಆರೋಗ್ಯ ಕಾರ್ಯಕರ್ತರು 5 ವರ್ಷದ ಮಕ್ಕಳಿಗೆ ಪೋಲಿಯೋ ಲಸಿಕೆ ನೀಡಲಿದ್ದಾರೆ. ಸಾರ್ವಜನಿಕರು ಲಸಿಕಾ ಅಭಿಯಾನದ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

1132 ಲಸಿಕಾ ಬೂತ್‌ಗಳ ಸ್ಥಾಪನೆ: ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ನಂದಿತಾ ಅವರು ಮಾತನಾಡಿ, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 143, ಜಿಲ್ಲೆಯ ದೇವದುರ್ಗ ತಾಲೂಕಿನಲ್ಲಿ 140, ಲಿಂಗಸುಗೂರು ತಾಲೂಕಿನಲಿ 211, ಮಾನ್ವಿ ತಾಲೂಕಿನಲ್ಲಿ 221, ಸಿಂಧನೂರು. ತಾಲೂಕಿನಲ್ಲಿ 248, ರಾಯಚೂರು ಗ್ರಾಮೀಣ ಭಾಗದಲ್ಲಿ 169 ಸೇರಿದಂತೆ ಜಿಲ್ಲಾದ್ಯಂತ 1132 ಬೂತ್‌ಗಳನ್ನು ಸ್ಥಾಪಿಸಲಾಗಿದೆ. ಲಸಿಕಾ ಕಾರ್ಯಕ್ರಮದ ಕುರಿತು ಆಟೋ, ಸ್ಥಳೀಯ ಸಂಸ್ಥೆಯ ಕಸದ ಸಂಗ್ರಹಣೆ ವಾಹನಗಳಲ್ಲಿ ಧ್ವನಿವರ್ಧಕಗಳ ಮೂಲಕ, ಬ್ಯಾನರ್ ಹಾಗೂ ಕರಪತ್ರಗಳನ್ನು ಅಂಟಿಸುವ ಮೂಲಕ ನಾಗರಿಕರಲ್ಲಿ ಅರಿವು ಮೂಡಿಸುವ ಕೆಲಸ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಬೂತ್‌ಗತೆಗೆ 33 ಮೊಬೈಲ್ ತಂಡ ಹಾಗೂ 53 ಟ್ರಾನ್ಸಿಟ್ ತಂಡಗಳು ಕಾರ್ಯನಿರ್ವಹಿಸಲಿದ್ದು, 2436 ಸ್ವಯಂ ಸೇವಕರು ಪಲ್ಸ್ ಪೋಲಿಯೊ ಲಸಿಕೆ ಹಾಕುವ ಕಾರ್ಯದಲ್ಲಿ ಪಾಲ್ಗೊಳ್ಳಲಿದ್ದಾರೆ. ಅದನ್ನು ಮೇಲ್ವಿಚಾರಣೆ ಮಾಡಲು 248 ಮೇಲ್ವಿಚಾರಕರು ಕೆಲಸ ಮಾಡಲಿದ್ದಾರೆ. 2 ರೈಲ್ವೇ ಸ್ಟೇಷನ್ ಸೇರಿದಂತೆ ಜಿಲ್ಲೆಯ ಎಲ್ಲ ಆಸ್ಪತ್ರೆಗಳು, ಕೆಲ ಶಾಲೆಗಳು, ಸಾರ್ವಜನಿಕ ಸ್ಥಳಗಳಲ್ಲಿ ಲಸಿಕೆ ನೀಡಲು ಪ್ರದೇಶವನ್ನು ಗುರುತಿಸಲಾಗಿದೆ. ಈ ಸಂಬಂಧ ಎಲ್ಲಾ ಕಡೆ ಸಕ್ರಿಯವಾಗಿ ಲಸಿಕೆ ಹಾಕುವ ಸಿಬ್ಬಂದಿಗಳನ್ನು ನಿಯೋಜಿಸಿ ಲಸಿಕೆ ಹಾಕುವ ಕಾರ್ಯವನ್ನು ಸಮರ್ಪಕವಾಗಿ ಮಾಡಲಾಗುವುದೆಂದು ಹೇಳಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಸ್ವಾಗತಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಡಾ.ವಿಜಯ ಶಂಕರ್, ಪಾಲಿಕೆ ಆರೋಗ್ಯಾಧಿಕಾರಿ ಡಾ.ಮಹಮ್ಮದ್ ಶಾಕೀರ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಗಣೇಶ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಸುನೀತಾ ಕಾಂಬಳೆ, ಡೆಂಗೆ ನಿಯಂತ್ರಣಾಧಿಕಾರಿ ಡಾ.ಚಂದ್ರಶೇಖರಯ್ಯ ಸ್ವಾಮಿ, ರಾಯಚೂರು ತಾಲೂಕು ಆರೋಗ್ಯಾಧಿಕಾರಿ ಡಾ.ಪ್ರಜ್ವಲ್, ಜೆಸ್ಕಾಂನ ಎಇಇ ಶಿವನಗುತ್ತಿ, ಸಾರಿಗೆ ಇಲಾಖೆಯ ಅರ್ಜುನ್, ರಾಯಚೂರು ಸಿಡಿಪಿಒ ಮನಸೂರ್ ಅಹ್ಮದ್ ಸೇರಿದಂತೆ ಇತರರು ಇದ್ದರು.

## ಸಾಹಿತ್ಯ ಸಿಂಚನ

ಮೋಹದ ಗಾಳಕೆ

ನೋಡದ ಆ ರತಿಗೆ
ನಿನ್ನ ಯಾಕೆ ಹೋಲಿಕೆ
ಕೂಡಿದ ಓ ಹೆಣ್ಣೆ
ನೀ ಸುಖದ ಮಾಲಿಕೆ

ಕಾಡಿತು ರೂಪ ನೀ
ಬೇಲೂರ ಬಾಲಿಕೆ
ಬೇಡಿತು ಈ ಮನವು
ಆ ಕ್ಷಣದ ಆಲಿಕೆ

ತೀರದ ಆಸೆ ನೀ ಈ
ತನುವ ಮೂಲಿಕೆ
ಅಂದ ಆಸೆಗೆ ಬಂಧ
ನಾವತ್ತ ವಾಲಿಕೆ

ಮೈಯ ಮಾಟದ ಗೊಂಬೆ
ರತಿಯಂತೆ ಆಕೆ
ಹದಿಬದಿಯ ಸಂಗ
ಆ ಜೇನ ಹಾಲಿಕೆ

ಮಧು ಹೀರುವಾಗ ನೀ
ಮಕರಂದ ಕಾಲಕೆ
ಬೀಳದವರುಂಟೆ ಹೆಣ್ಣ
ಮೋಹದ ಗಾಳಕೆ

ತುಳಸಿದಾಸ ಬಿ ಎಸ್

# ತಂತ್ರ–ತಿರುವು–ತಾಕತ್ತು: ಕವಿತಾಳ ಪಟ್ಟಣ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ 22ರಂದು ಚುನಾವಣೆ

❑ ನೈಜ್ಯ ದೆಸೆ ನ್ಯೂಸ್

**ಕವಿತಾಳ: ರಾಯಚೂರು ಜಿಲ್ಲೆಯ ಸಿರವಾರ ತಾಲೂಕಿನ ಕವಿತಾಳ ಪಟ್ಟಣ ಪಂಚಾಯಿತಿಯಲ್ಲಿ ಅಧ್ಯಕ್ಷ ಕುರ್ಚಿಗಾಗಿ ರಾಜಕೀಯ ಕದನ ತೀವ್ರಗೊಂಡಿದೆ. ಡಿಸೆಂಬರ್ 22ರಂದು ಅಧ್ಯಕ್ಷರ ಆಯ್ಕೆಗೆ ದಿನಾಂಕ ನಿಗದಿಯಾಗುತ್ತಿದ್ದಂತೆ, ಪಟ್ಟಣದಲ್ಲಿ ರಾಜಕೀಯ ಚಟುವಟಿಕೆಗಳು ಗರಿಗೆದ–ರಿದ್ದು, ತಂತ್ರ–ಪ್ರತಿತಂತ್ರಗಳ ಆಟ ಶುರುವಾಗಿದೆ.**

ಹೊರಗೆ ಪರಸ್ಪರ ಒಪ್ಪಂದದ ಮಾತುಗಳನ್ನು ಆಡುತ್ತಿರುವ ರಾಜ–ಕೀಯ ಪಕ್ಷಗಳು, ಒಳಗೊಳಗೆ ತಮ್ಮ ತಮ್ಮ ಗುಂಪುಗಳನ್ನು ಬಲಪಡಿಸುವ ಕಾರ್ಯದಲ್ಲಿ ತೊಡಗಿವೆ. ಅಧ್ಯಕ್ಷ ಸ್ಥಾನಕ್ಕಾಗಿ ರಾಜೇಶ್ವರಿ ತಿಪ್ಪಯ್ಯಸ್ವಾಮಿ ಅಧ್ಯಕ್ಷರಾಗುವ ಸಾಧ್ಯತೆ ಇದೆ. ಒಗ್ಗಟ್ಟಿನ ಘೋಷಣೆಗಳು ಕೇವಲ ಮಾತಿನ ಮಟ್ಟಕ್ಕೆ ಸೀಮಿತವಾಗಿವೆ ಎಂಬ ಆರೋಪಗಳು ಕೇಳಿಬರುತ್ತಿವೆ.




ಕವಿತಾಳ ಪಟ್ಟಣ ಪಂಚಾಯಿತಿಯಲ್ಲಿ ಒಟ್ಟು 16 ಸದಸ್ಯರ ಬಲವಿದ್ದು, ಅಧ್ಯಕ್ಷ ಸ್ಥಾನಕ್ಕೆ ಬಹುಮತ ಸಾಧಿಸಲು ಕನಿಷ್ಠ 9 ಸದಸ್ಯರ ಬೆಂಬಲ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸ್ಥಳೀಯ ಸದಸ್ಯರ ಜೊತೆಗೆ ಶಾಸಕರು ಹಾಗು ಲೋಕಸಭಾ ಸದಸ್ಯರ ಪಾತ್ರವೂ ನಿರ್ಣಾಯಕವಾಗಲಿದೆ ಎಂಬ ಲೆಕ್ಕಾಚಾರಗಳು ರಾಜಕೀಯ ವಲಯದಲ್ಲಿ ಜೋರಾಗಿ ನಡೆಯುತ್ತಿವೆ. ಕೆಲ ಸದಸ್ಯರನ್ನು 'ಸುರಕ್ಷಿತ' ಸ್ಥಳಗಳಲ್ಲಿ ಇರಿಸುವ ಯತ್ನವೂ ನಡೆಯುತ್ತಿದೆ ಎಂಬ ಗುಸುಗುಸು ರಾಜಕೀಯ ವಲಯದಲ್ಲಿ ಹರಡಿದೆ.

ಜನಸೇವೆಯ ಹೆಸರಿನಲ್ಲಿ ಆಯ್ಕೆಯಾದ ಜನಪ್ರತಿನಿಧಿಗಳು ಇದೀಗ ಕುರ್ಚಿಗಾಗಿ ತೋರಿಸುತ್ತಿರುವ ಆಸಕ್ತಿ ಸಾರ್ವಜನಿಕ ವಲಯದಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. ಅಭಿವೃದ್ಧಿ, ಮೂಲಸೌಕರ್ಯ, ಕುಡಿಯುವ ನೀರು, ಸ್ವಚ್ಛತೆ ಮುಂತಾದ ವಿಚಾರಗಳು ಹಿನ್ನೆಲೆಗೆ ಸರಿದಿದ್ದು, ಅಧಿಕಾರದ ಲೆಕ್ಕಾಚಾರವೇ ರಾಜಕೀಯದ ಕೇಂದ್ರಬಿಂದುವಾಗಿದೆ ಎಂಬ ಟೀಕೆಗಳು ಕೇಳಿಬರುತ್ತಿವೆ. ರಾಜಕೀಯ ವಿಶ್ಲೇಷಕರ ಪ್ರಕಾರ, ಕೊನೆಯ ಕ್ಷಣದಲ್ಲಿ ತಿರುವುಗಳು ಸಂಭವಿಸುವ ಸಾಧ್ಯತೆ ಹೆಚ್ಚಿದ್ದು, ತಂತ್ರ?ತಾಕತ್ತಿನ ಆಟ ಇನ್ನಷ್ಟು ಗಂಭೀರವಾಗುವ ಲಕ್ಷಣಗಳಿವೆ. ಫಲಿತಾಂಶ ಯಾವ ದಿಕ್ಕು ತಾಳಲಿದೆ ಎಂಬುದರ ಬಗ್ಗೆ ಇನ್ನೂ ಸ್ಪಷ್ಟತೆ ಇಲ್ಲದೆ ಇರುವುದೇ ಈ ಚುನಾವಣೆಯ ವಿಶೇಷತೆ ಎನ್ನಲಾಗುತ್ತಿದೆ. ಒಟ್ಟಿನಲ್ಲಿ, ಕವಿತಾಳ ಪಟ್ಟಣ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕಾಗಿ ನಡೆಯುತ್ತಿರುವ ಈ ಪೈಪೋಟಿ ರಾಜಕೀಯ ಕುತೂಹಲ ಹೆಚ್ಚಿಸಿದ್ದು, ಡಿಸೆಂಬರ್ 22ರಂದು ನಡೆಯಲಿರುವ ಚುನಾವಣೆ ಸ್ಥಳೀಯ ರಾಜಕಾರಣಕ್ಕೆ ಸ್ಪಷ್ಟ ದಿಕ್ಕು ನೀಡಲಿದೆ ಎಂಬ ನಿರೀಕ್ಷೆಯೊಂದಿಗೆ ಪಟ್ಟಣದ ಜನತೆ ಕಾದು ನೋಡುತ್ತಿದ್ದಾರೆ.

# ಶಿವಚಿದಂಬರ ಜಪಯಜ್ಞ ಸಂಕಲ್ಪಕ್ಕೆ ಚಾಲನೆ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ತಾಲ್ಲೂಕಾ ಬ್ರಾಹ್ಮಣ ಸಮಾಜದ ವತಿಯಿಂದ ಪಟ್ಟಣದ ನಿಮಿಷಾಂಬಾ ದೇವಸ್ಥಾನದಲ್ಲಿ ಆರು ಕೋಟಿ ಶಿವಚಿದಂಬರ ಜಪಯಜ್ಞ ಸಂಕಲ್ಪಕ್ಕೆ ಶನಿವಾರ ಸಂಜೆ ಚಾಲನೆ ನೀಡಲಾಯಿತು.**

ಆರಂಭದಲ್ಲಿ ಆರಂಭದಲ್ಲಿ ಶಿವಚಿದಂಬರ ಭಾವಚಿತ್ರಕ್ಕೆ ಹಾಗೂ ವೀಣೆಗೆ ಭಕ್ತಿ ಪೂಜೆ ಸಲ್ಲಿಸಲಾಯಿತು. ನಂತರ ನಾಲ್ಕು ಅಭಂಗ ಭಜನೆ ಹಾಡಲಾಯಿತು. ಸಾನ್ನಿಧ್ಯ ವಹಿಸಿದ್ದ ಹುಬ್ಬಳ್ಳಿಯ ಪೂರ್ಣಾನಂದ ಟ್ರಸ್ಟ, ಗಾಮನಗಟ್ಟಿಯ ಚಿದಂಬರ ನಾಮ ಸಾದನಾ ಕೇಂದ್ರದ ಗುರು ಚಿದಂಬರ ದಿಕ್ಷಿತ ಅವರು, ತಮ್ಮ ಪ್ರವಚನದಲ್ಲಿ ಭೌತಿಕ ಜಗತ್ತಿನಲ್ಲಿ ಸಂಸಾರದ ಜಂಜಾಟದಲ್ಲಿ ನೆಮ್ಮದಿ ಬದುಕಿಗೆ



ಭಗವಂತನ ನಾಮಸ್ಮರಣೆ ಅತ್ಯವಶ್ಯಕವಾಗಿದೆ. ಬಿಡುವಿಲ್ಲದ ಸಂಸಾರ ಸಾಗರದಲ್ಲಿ ಅವನ ಸ್ಮರಣೆಗೆ ಸಮಯಾವಕಾಶ ನೀಡಬೇಕು. ಸತ್ಸಂಗದಲ್ಲಿ ಪಾಲ್ಗೊಳ್ಳಬೇಕು. ಇದರಿಂದ ಬದುಕಿನ ನೆಮ್ಮದಿ, ಸಾರ್ಥಕತೆ ಜೊತೆಗೆ ಮೋಕ್ಷಕ್ಕೆ ದಾ–ರಿಯಾಗುತ್ತದೆ ಎಂದರು. ಜಪಮಣಿ ಪಡೆದವರು ಅದನ್ನು ಪೂರ್ಣ ವ್ರತವನ್ನು ಮಾಡಬೇಕು.

ಮನದ ಕಲ್ಮಶಗಳನ್ನು ಕಳೆದು ಮನಸ್ಸನ್ನು ನಿರ್ಮಲವಾಗಿಸಿಕೊಂಡು ಭಗವಂತನಲ್ಲಿ ಮನಸ್ಸನ್ನು ಕೇಂದ್ರೀಕರಿಸಬೇಕು ಇದ–ರಿಂದ ಸುಖಶಾಂತಿ ದೊರೆಯುವುದು ಎಂದರು. . ಪ್ರವಚನ ನಂತರ ಭಕ್ತಾದಿಗಳಿಗೆ ಜಪಮಾಲೆ ವಿತರಣೆ ಮಾಡಲಾಯಿತು. ಮಹಾಮಂಗಳಾರತಿ, ಪ್ರಸಾದ ವಿತರಣೆ ನಡೆಯಿತು. ಕಾರ್ಯಕ್ರಮದಲ್ಲಿ ತಾಳಿಕೋಟೆ ತಾಲ್ಲೂಕು ಬ್ರಾಹ್ಮಣ ಸಮಾಜದ ಅಧ್ಯಕ್ಷ ಭೀಮರಾವ್ ಕುಲಕರ್ಣಿ, ಜಗದೀಶ ದೇಶಪಾಂಡೆ, ಮಾಣಿಕರಾವ್ ಕುಲಕರ್ಣಿ, ಹಣಮೇಶ ಕುಲಕರ್ಣಿ, ಶೇಷಗಿರಿ ಕುಲಕರ್ಣಿ ಸೇರಿದಂತೆ ನೂರಾರು ಮಹಿಳಾ ಮತ್ತು ಪುರುಷ ಭಕ್ತಾದಿಗಳು ಪಾಲ್ಗೊಂಡಿದ್ದರು.

## ಗ್ಯಾರಂಟಿ ಯೋಜನೆಗಳ ಉಪಾಧ್ಯಕ್ಷ ಎಸ್.ಆರ್. ಮೆಹರೋಜ್ ಖಾನ್ ರಾಯಚೂರು ಜಿಲ್ಲಾ ಪ್ರವಾಸ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಡಿಸೆಂಬರ್ 20 (ಕರ್ನಾಟಕ ವಾರ್ತೆ): ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷರಾದ ಎಸ್.ಆರ್.ಮೆಹರೋಜ್ ಖಾನ್ ಅವರು ಡಿಸೆಂಬರ್ 21ರಿಂದ ರಾಯಚೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಡಿಸೆಂಬರ್ 21ರ ಬೆಳಿಗ್ಗೆ 11 ಗಂಟೆಗೆ ರಸ್ತೆಯ ಮೂಲಕ ಬೆಂಗಳೂ–ರಿನಿಂದ ನಿರ್ಗಮಿಸಿ ಸಂಜೆ 6ಗಂಟೆಗೆ ರಾಯಚೂರಿಗೆ ಆಗಮಿಸುವರು.**

ಡಿಸೆಂಬರ್ 22ರ ಮಧ್ಯಾಹ್ನ 2 ಗಂಟೆಗೆ ನಗರದ ಕೃಷಿ ವಿಶ್ವವಿದ್ಯಾಲಯದ ಆವರಣದ ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೊಂದಿಗೆ ಯುವನಿಧಿ ಯೋಜನೆ ಸೇ–ರಿದಂತೆ ಗ್ಯಾರಂಟಿ ಯೋಜನೆಗಳು ವಿದ್ಯಾರ್ಥಿಗಳು ಹಾಗೂ ಸಮಾಜದಲ್ಲಿ ಬೀರಿರುವ ಸಕಾರಾತ್ಮಕ ಪರಿಣಾಮಗಳ ಕು–ರಿತು ಮುಕ್ತ ಸಂವಾದ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಸಂಜೆ 4 ಗಂಟೆಗೆ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಪ್ರಸ್ತುತದವರೆಗೆ ಸಾಧಿಸಿರುವ ಪ್ರಗತಿಯ ಕುರಿತು ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಜಿಲ್ಲಾ ಮತ್ತು ತಾಲೂಕು ಗ್ಯಾರಂಟಿ ಸಮಿತಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗಿಯಾಗುವವರು. ಸಂಜೆ 6 ಗಂಟೆಗೆ ಪಕ್ಷದ ಕಚೇರಿಗೆ ಭೇಟಿ ನೀಡಿ ಪಕ್ಷದ ಮುಖಂಡರೊಂದಿಗೆ ಸಭೆ ನಡೆಸಿ, ಬೀದರ್ ಜಿಲ್ಲೆಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿಗಳಾದ ಚಂದ್ರಶೇಖರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿಸೆಂಬರ್ 24ರಂದು ರಾಷ್ಟ್ರೀಯ ಗ್ರಾಹಕರ ದಿನಾಚರಣೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಡಿಸೆಂಬರ್ 20 (ಕರ್ನಾಟಕ ವಾರ್ತೆ): ಆಹಾರ, ನಾಗ–ರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ ಡಿಸೆಂಬರ್ 24ರ ಬೆಳಿಗ್ಗೆ 10 ಗಂಟೆಗೆ ನಗರದ ಸರ್ಕಾರಿ ನೌಕರರ ಭವನದಲ್ಲಿ ರಾಷ್ಟ್ರೀಯ ಗ್ರಾಹಕರ ದಿನಾಚರಣೆ–2025 ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

# ಶ್ರೇಷ್ಠ ತೋಟಗಾರಿಕಾ ಪ್ರಶಸ್ತಿಗೆ ರೈತರ ಆಯ್ಕೆ



❑ ನೈಜ್ಯ ದೆಸೆ ನ್ಯೂಸ್

**ಬಾಗಲಕೋಟೆ: ಭಾನುವಾರದಿಂದ ಆರಂಭವಾಗಲಿರುವ 14 ನೇ ತೋಟಗಾರಿಕಾ ಮೇಳದ ಮೂರು ದಿನಗಳಂದು ಈ ಸಾಲಿಗೆ ಆಯ್ಕೆಯಾದ ಶ್ರೇಷ್ಠ ತೋಟಗಾರಿಕಾ ರೈತರಿಗೆ ಪ್ರಶಸ್ತಿ ನೀಡಲಾಗುವುದು. ಶ್ರೇಷ್ಠ ತೋಟಗಾ–ರಿಕಾ ಪ್ರಶಸ್ತಿಗೆ ಆಯ್ಕೆಯಾದವರು ಇಂತಿದ್ದಾರೆ.**

ವಿ.ಮಂಜುನಾಥ (ಕೋಲಾರ ಜಿಲ್ಲೆ), ಬಿ.ನಂಜುಂಡಗೌಡ (ಚಿಕ್ಕಬಳ್ಳಾಪುರ), ನಾಗಪ್ಪ ಕುಪ್ಪುಗೌಡ (ಉತ್ತರ ಕನ್ನಡ), ಮಹಾದೇವ ಮೆಳ್ಳಿಗೇರಿ (ಬಾಗಲಕೋಟೆ), ಸತ್ಯಶೀಲ ನಿಡೋದ (ಬೀದರ), ಶರ್ವಕುಮಾರ ಆವಂತಿ (ಕಲಬುರ್ಗಿ), ವಿಶ್ವಶಂಕರ ಸಂತೋಷಕುಮಾರ (ಯಾದಗಿರಿ), ಬಸವರಾಜ ಪರಗೊಂಡಪ್ಪ ಸಿದ್ದಾಪುರ (ವಿಜಯಪುರ). ಜಗದೀಶ ಪಿ. (ಮೈಸೂರು ಜಿಲ್ಲೆ), ಸಿದ್ದೇಗೌಡ ಎನ್. (ಚಾಮರಾಜನಗರ), ಎಚ್. ಎನ್.ಸತ್ಯನಾರಾಯಣ್ (ಮಂಡ್ಯ), ಲಕ್ಷ್ಮೀ ಟಿ.ಎಂ. (ಹಾಸನ), ಕಲಾವತಿ ಮಾರುತಿ ಚವನಗೌಡರ (ಧಾರವಾಡ), ಭೀಮರಾವ್ ತಾನಾಜಿರಾವ್ ಶಿಂಧೆ (ಗದಗ), ನಾಗರಾಜ ಶಿವಾನಂದ ಹುಲಗೂರ (ಹಾವೇರಿ), ಬಾಳಪ್ಪ ಬಸಪ್ಪ ಬೆಳಕೂಡ (ಬೆಳಗಾವಿ).

ರಮೇಶ ಎಚ್. (ಬೆಂಗಳೂರು ಗ್ರಾಮಾಂತರ ಜಿಲ್ಲೆ), ಮುನಿರಾಜು ಬಿ.ಎನ್. (ಬೆಂಗಳೂರು ನಗರ), ದೇವರಾಜು ಜಿ. (ರಾಮನಗರ), ಚನ್ನಕೇಶವಸ್ವಾಮಿ (ತುಮಕೂರು), ಸುದೇಶಕುಮಾರ ವೀರಬಸಪ್ಪ ಪಟ್ಟಣಶೆಟ್ಟಿ (ಕೊಪ್ಪಳ), ಪದ್ಮಾವತಿ ಶರಣಬಸವ ಬಾಗೋಡಿ (ರಾಯಚೂರ), ಕೆ.ಬಸಪ್ಪ ಚನ್ನಬಸಪ್ಪ (ಬಳ್ಳಾರಿ), ಮಹೇಶ್ವರ ಸ್ವಾಮಿಗಳು (ವಿಜಯನಗರ). ಡಿ. 21ರಂದು 8 ರೈತರು, ಡಿ. 22ರಂದು 8 ಹಾಗೂ ಡಿ. 23 8 ರೈತರನ್ನು ಸನ್ಮಾನಿಸಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

## ರಾಯಚೂರು ಉತ್ಸವ ತಯಾರಿ ಪೂರ್ವಭಾವಿ ಸಭೆ 22ಕ್ಕೆ

❑ ನೈಜ್ಯ ದೆಸೆ ನ್ಯೂಸ್


**ರಾಯಚೂರು ಡಿಸೆಂಬರ್ 20 (ಕರ್ನಾಟಕ ವಾರ್ತೆ): 2026ರ ಜನವರಿ ಮಾಹೆಯಲ್ಲಿ ರಾಯಚೂರು ಉತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಈ ಉತ್ಸವದ ಸಿದ್ಧತೆಗಾಗಿ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರ ಅಧ್ಯಕ್ಷತೆಯಲ್ಲಿ ಡಿಸೆಂಬರ್ 22ರ ಬೆಳಿಗ್ಗೆ 10.30ಕ್ಕೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿದ್ದು, ಈ ಸಭೆಗೆ ಜಿಲ್ಲೆಯ ಎಲ್ಲಾ ಅಧಿಕಾರಿ, ಸಿಬ್ಬಂದಿ ಖುದ್ದಾಗಿ ಹಾಜರಾಗುವಂತೆ ಅಪರ**

# ಶಾಸಕ ಅಪ್ಪಾಜಿ ನಾಡಗೌಡರ ಪ್ರವಾಸ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಪಟ್ಟಣದಲ್ಲಿ ಡಿ.21 ರಿಂದ 23 ರವರೆಗೆ ಮೂರು ದಿನಗಳ ಕಾಲ ಮುದ್ದೇಬಿಹಾಳ ಮತಕ್ಷೇತ್ರದ ಶಾಸಕ, ಕರ್ನಾಟಕ ಸರ್ಕಾರದ ಸೋಪ್ಸ್ ಮತ್ತು ಡಿಟರ್ಜಂಟ್ ನಿಯಮಿತದ ಅಧ್ಯಕ್ಷ ಸಿ.ಎಸ್.ನಾಡಗೌಡ ಅಪ್ಪಾಜಿ ಅವರು ವಾಸ್ತವ್ಯ ಮಾಡಲಿದ್ದಾರೆ.**

**ಪಟ್ಟಣದಲ್ಲಿ ಡಿ.21 ಮತ್ತು 22 ರಂದು ಶಾಸಕರ ಅಧ್ಯಕ್ಷತೆಯಲ್ಲಿ ಪ್ರತಿ ವಾರ್ಡಿನಲ್ಲಿ**



**ಪುರಸಭೆ ಅಧಿಕಾರಿಗಳು ಸಾರ್ವಜನಿಕ ಸಭೆ ನಡೆಸಿ ಸಾರ್ವಜನಿಕ ಕುಂದು ಕೊರತೆ ಮತ್ತು ವಾರ್ಡಿನ ಸಮಸ್ಯೆ ಕುರಿತು ಜನರ ಜೊತೆ ಸಮಾಲೋಚನೆ ನಡೆಸುವರು.**

ಡಿ.21ರಂದು ವಾರ್ಡ ನಂ.1 ರಿಂದ 9ನೆಯ ವಾರ್ಡುಗಳು ಹಾಗೂ ಡಿ.22ರಂದು ವಾರ್ಡ ನಂ.10 ರಿಂದ 23 ರವರೆಗೆ ಕುಂದುಕೊರತೆ ಸಭೆಗಳನ್ನು ಪುರಸಭೆ ಆಡಳಿತಾಧಿಕಾರಿಗಳಾದ ಉಪವಿಭಾಗಾಧಿಕಾರಿ, ವಿಜಯಪುರ ಜಿಲ್ಲಾ ನಗರಾಭಿವೃದ್ಧಿಕೋಶದ ಯೋಜನಾ ನಿರ್ದೇಶಕರ ಸಮ್ಮುಖದಲ್ಲಿ ನಿರ್ಧಾರಿತ ಸ್ಥಳದಲ್ಲಿ ಬೆಳಿಗ್ಗೆ 9.00 ರಿಂದ ಸಾ.5.00 ಗಂಟೆ ವರೆಗೆ ಕುಂದುಕೊರತೆ ಸಭೆ ಜರುಗಲಿವೆ. ಡಿ.23 ರಂದು ಪಟ್ಟಣದ ಪುರಸಭಾ ಆವರಣದಲ್ಲಿ ಬೆಳಿಗ್ಗೆ 11 ಘಂಟೆಗೆ ಅಧಿಕಾರಿಗಳ ತ್ರೈಮಾಸಿಕ (ಕೆ.ಡಿ.ಪಿ) ಸಭೆ ನಡೆಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.


# ಡಿಸೆಂಬರ್ 21ರವರೆಗೆ ಬೆಳಗಿನ ಜಾವ ತೀವ್ರ ಶೀತ ಗಾಳಿ ಬೀಸುವ ಸಾಧ್ಯತೆ, ಸಾರ್ವಜನಿಕರಿಗೆ ಮುಂಜಾಗ್ರತಾ ಸಲಹೆಗಳು

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 20 (ಕರ್ನಾಟಕ ವಾರ್ತೆ): ಭಾರತೀಯ ಹವಾಮಾನ ಇಲಾಖೆಯ ವರದಿಯಂತೆ ಡಿಸೆಂಬರ್ 20 ರಿಂದ 21ರವರೆಗೆ ರಾಯಚೂರು ಜಿಲ್ಲೆಯಾದ್ಯಂತ ಬೆಳಗಿನ ಜಾವ ತೀವ್ರವಾದ ಶೀತ ಗಾಳಿ ಬೀಸುವ ಸಾಧ್ಯತೆಯಿರುತ್ತದೆ. ಹಾಗೂ ಸಾಮಾನ್ಯ ತಾಪಮಾನಕ್ಕಿಂತ 4–6 ಡಿಗ್ರಿ ಸೆಲ್ಸಿಯಸ್ ನಷ್ಟು ಕಡಿಮೆ ಆಗುವ ಸಾಧ್ಯತೆರುವ ಕಾರಣ ಮುಂಜಾಗ್ರತಾ ಕ್ರಮವಾಗಿ ಎಲ್ಲಾ ಸಾರ್ವಜನಿಕರು ತಮ್ಮ ಆರೋಗ್ಯ ಕಾಪಾಡಿಕೊಳ್ಳುವಂತೆ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲೆಯ ಜಿಲ್ಲಾಧಿಕಾ–ರಿಗಳಾದ ನಿತೀಶ್ ಕೆ. ಅವರು ಸಲಹೆ ಮಾಡಿದ್ದಾರೆ.**

ಸಾರ್ವಜನಿಕರು ಮುಂಜಾಗ್ರತಾ ಕ್ರಮವಾಗಿ ತಮ್ಮ ಆರೋಗ್ಯ ಕಾಪಾಡಿಕೊಳ್ಳಲು ಸಲಹೆಗಳನ್ನು ಪಾಲನೆ ಮಾಡಬೇಕು. ಏನು ಮಾಡಬೇಕು: ಸಾರ್ವಜನಿಕರು ಬೆಳಗ್ಗೆ ಸೂರ್ಯೋದಯಕ್ಕಿಂತ ಮುಂಚೆ ಹಾಗೂ ಸೂರ್ಯಾಸ್ತದ ನಂತರ ವಾಕಿಂಗ್ ಬರುವಾಗ ಮುನ್ನೆಚ್ಚರಿಕೆ ವಹಿಸಿಬೇಕು. ಸಾಧ್ಯವಾದಷ್ಟು ಮನೆ ಬಿಟ್ಟು ಹೊರಗಡೆ ಬರಬಾರದು. ಒಂದು ವೇಳೆ ಅವಶ್ಯವಿದ್ದಲ್ಲಿ ಬೆಚ್ಚನೆಯ ಉಡ–ಪುಗಳಾದ ಸ್ವೇಟರ್, ಜಾಕೇಟ್, ಉಲನ್ ಟೋಪಿ, ಕಾಲುಕುಬುಸ, ಕೈಗವ ಧರಿಸಬೇಕು. ಹಿರಿಯರಿಗೆ ಹಾಗೂ ಮಕ್ಕಳನ್ನು ಅನವಶ್ಯಕವಾಗಿ ಮನೆಯಿಂದ ಹೊರಗಡೆ ಬಿಡದಿರಲು ಹಾಗೂ ಅವರ ಆರೋಗ್ಯದ ಕಡೆ ಗಮನ ಹರಿಸಬೇಕು.

ಜ್ವರ, ಉಸಿರು ಕಟ್ಟಿಕೊಳ್ಳುವ, ಮೂಗು ಅಥವಾ ಮೂಗಿನ ರಕ್ತಸ್ರಾವದಂತಹ ವಿವಿಧ ಕಾಯಿಲೆಗಳು ಹೆಚ್ಚಿನ ಸಂಭವನಿಯತೆಯು



ಸಾಮಾನ್ಯವಾಗಿ ಶೀತಕ್ಕೆ ದೀರ್ಘಕಾಲದವರೆಗೆ ಒಡ್ಡಿಕೊಳ್ಳುವುದರಿಂದ ಉಲ್ಬಣಗೊಳ್ಳುತ್ತದೆ. ಈ ರೀತಿಯ ರೋಗಲಕ್ಷಣಗಳಿಗಾಗಿ ವೈದ್ಯರನ್ನು ಸಂಪರ್ಕಿಸಬೇಕು. ಶೀತ ಅಲೆಯು ನಿಮ್ಮ ಪ್ರದೇಶದಲ್ಲಿ ಇದೆಯೇ ಎಂದು ತಿಳಿಯಲು ರೇಡಿಯೊವನ್ನು ಆಲಿಸಿ, ಟಿವಿ ವೀಕ್ಷಿಸಿ. ಸ್ಥಳೀಯ ಹವಾಮಾನ ಮುನ್ಸೂಚನೆಗಾಗಿ ಪತ್ರಿಕೆಗಳನ್ನು ಓದಬೇಕು. ತುರ್ತು ಸಾಮಗ್ರಿಗಳನ್ನು ಸಿದ್ಧವಾಗಿಡಬೇಕು.

ದೇಹದ ಉಷ್ಣತೆಯ ಸಮತೋಲನವನ್ನು ಕಾಪಾಡಿಕೊಳ್ಳಲು ಆರೋಗ್ಯಕರ ಆಹಾರವನ್ನು ಸೇವಿಸಿ ಬಿಸಿ ದ್ರವಗಳನ್ನು ನಿಯಮಿತವಾಗಿ ಕುಡಿಯಿರಿ, ಏಕೆಂದರೆ ಇದು ಶೀತದ ವಿರುದ್ಧ ಹೋರಾಡಲು ದೇಹದ ಉಷ್ಣತೆಯನ್ನು ಕಾಪಾಡಿಕೊಳ್ಳುತ್ತದೆ. ಏನು ಮಾಡಬಾರದು: ಶೀತಕ್ಕೆ ದೀರ್ಘಕಾಲದವರೆಗೆ ಒಡ್ಡಿಕೊಳ್ಳುವುದನ್ನು ತಪ್ಪಿಸಬೇಕು. ಮದ್ಯಪಾನ ಮಾಡಬೇಡಿ. ಇದು ನಿಮ್ಮ ದೇಹದ ಉಷ್ಣತೆಯನ್ನು ಕಡಿಮೆ ಮಾಡುತ್ತದೆ. ಇದು ವಾಸ್ತವವಾಗಿ ನಿಮ್ಮ ರಕ್ತನಾಳಗಳನ್ನು ಕಿರಿದಾಗಿಸುತ್ತದೆ. ವಿಶೇಷವಾಗಿ ಕೈಯಲ್ಲಿ ಇದು ಲಘೋಷ್ಣತೆಯ ಅಪಾಯವನ್ನು ಹೆಚ್ಚಿಸುತ್ತದೆ. ನಡುಗುವುದನ್ನು ನಿರ್ಲಕ್ಷಿಸಬೇಡಿ ಏಕೆಂದರೆ ದೇಹವು ಶಾಖವನ್ನು ಕಳೆದುಕೊಳ್ಳುವ ಮೊದಲ ಸಂಕೇತವಾಗಿರುತ್ತದೆ. ಆದ್ದರಿಂದ ಮನೆಯೊಳಗೆ ವಿಶ್ರಾಂತಿ ಪಡೆಯಿರಿ. ಸಂಪೂರ್ಣವಾಗಿ ಎಚ್ಚರಗೊಳ್ಳದ ಹೊರತು ಪೀಡಿತ ವ್ಯಕ್ತಿಗೆ ಯಾವುದೇ ದ್ರವವನ್ನು ನೀಡಬಾರದು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ನೇಮಕಾತಿ ಪ್ರಕಟಣೆ

HAL ಇಂಡಿಯಾ ನೇಮಕಾತಿ 2025 – 156 ಆಪರೇಟರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ HAL ಇಂಡಿಂ–ಯಾ ನೇಮಕಾತಿ 2025: 156 ಆಪರೇಟರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಡಿಸೆಂಬರ್ 2025 ರ ಊಂಐ ಇಂಡಿಯಾ ಅಧಿಕೃತ ಅಧಿಸೂಚನೆಯ ಮೂಲಕ ಆಪರೇಟರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಮೇಥಿ, ಲಕ್ನೋ–ಉತ್ತರ ಪ್ರದೇಶ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 25–ಡಿಸೆಂಬರ್–2025 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 15–12–2025 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25–ಡಿಸೆಂಬರ್–2025 ಪ್ರವೇಶ ಪತ್ರ ಡೌನ್‌ಲೋಡ್: 31 ಡಿಸೆಂಬರ್ 2025 ರಿಂದ ಆನ್‌ಲೈನ್‌ನಲ್ಲಿ ಡೌನ್‌ಲೋಡ್ Official Website: hal-india.co.in https://hallko.reg.org.in/Login ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25–ಡಿಸೆಂಬರ್–2025

## ಉಚಿತ ಆರೋಗ್ಯ ತಪಾಸಣಾ ಶಿಬಿರ–ಪಗಡಡಿನ್ನಿ ಪೈ ಕ್ಯಾಂಪ್

ನೈಜ್ಯ ದೆಸೆ ನ್ಯೂಸ್

**ಶ್ರೀ ಸತ್ಯ ಸಾಯಿಬಾಬಾ ಸೇವಾ ಸಂಸ್ಥೆಗಳು ರಾಯಚೂರು ನೇತೃತ್ವ ಹಾಗೂ ಸಹಕಾರದೊಂದಿಗೆ ಭಗವಾನ್ ಶ್ರೀ ಸತ್ಯಸಾಯಿ ಬಾಬಾರವರ ಸಾನಿಧ್ಯದಲ್ಲಿ ಸಪ್ತಗಿರಿ ಆಸ್ಪತ್ರೆ ಬೆಂಗಳೂರು ಮತ್ತು ಸನ್ ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ ನ ಸಂಯುಕ್ತಾಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು ಸಾಯಿ ದರ್ಶಿನಿ ಕಲ್ಯಾಣ ಮಂಟಪದಲ್ಲಿ ಶ್ರೀ ಸತ್ಯ ಸಾಯಿ ಬಾಬಾ ರವರ ಪೂಜಾ ಕಾರ್ಯಕ್ರಮ ಹಾಗೂ ಭಕ್ತಿ ಗೀತೆಯೊಂದಿಗೆ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಾಯಿತು.**



ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಹೃದಯ ರೋಗ ನರರೋಗ ಕ್ಯಾನ್ಸರ್ ಮೂತ್ರಪಿಂಡ ಕಲ್ಲು ಕಾಯಿಲೆ ಹಾಗೂ ಇತರ ಅನೇಕ ರೋಗಗಳಿಗೂ ಸಹ ಚಿಕಿತ್ಸೆ ಮಾಡಲಾಯಿತು ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ವಿಶೇಷವಾಗಿ ಉಚಿತ ಇಸಿಜಿ ಟುಡಿ ಎಕೋ ಗಳಂತಹ ಪರೀಕ್ಷೆಗಳ ಸೌಲಭ್ಯ ಗಳನ್ನ ಸಹ ಉಚಿತವಾಗಿ ಒದಗಿಸಲಾಯಿತು 350ಕ್ಕೂ ಹೆಚ್ಚು ರೋಗಿಗಳ ತಪಾಸಣೆ ಮಾಡಿ ಔಷಧೋಪಚಾರ ನೀಡಲಾಯಿತು, 50 ರೋಗಿಗಳಿಗೆ ಇಸಿಜಿ ಹಾಗೂ 52 ರೋಗಿಗಳಿಗೆ ಎಕೋ ಪರೀಕ್ಷೆ ಮಾಡಲಾಯಿತು, ಹೆಚ್ಚಿನ ಚಿಕಿತ್ಸೆಗಾಗಿ 35 ರೋಗಿಗಳನ್ನು ಸಪ್ತಗಿರಿ ಆಸ್ಪತ್ರೆ ಬೆಂಗಳೂರಿಗೆ ಶಿಫಾರಸು ಮಾಡಲಾಯಿತು. ಉಚಿತ ಆರೋಗ್ಯ ತಪಾಸಣೆಯ ಕೋ ಆರ್ಡಿನೇಟರ್ ಆದಂತಹ ಶ್ರೀ ರಾಘವೇಂದ್ರ ಅವರು ಉಚಿತವಾಗಿ ಚಿಕಿತ್ಸೆ ಮತ್ತು ಶಸ್ತ್ರ ಚಿಕಿತ್ಸೆ ನಡೆಸುವುದಾಗಿ ಭರವಸೆ ನೀಡಿದರು, ಈ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್, ಪ್ಯಾರಾ ಮೆಡಿಕಲ್ ಹಾಗೂ ಫಾರ್ಮಸಿ ವಿದ್ಯಾರ್ಥಿಗಳು ರೋಗಿಗಳ ಆರೈಕೆ ಬಿಪಿ ಶುಗರ್ ಪರೀಕ್ಷೆಗಳನ್ನು ಯಶಸ್ವಿಯಾಗಿ ನಿರ್ವಹಿಸಿ ಆರೋಗ್ಯ ಯೋಧರಾಗಿ ತಮ್ಮ ಸೇವೆಯನ್ನು ನೀಡಿದರು, ಸನ್ ರೈಸ್ ಸ್ಕೂಲ್ ಆಫ್ ಆಫ್ ನರ್ಸಿಂಗ್ ನ ಪ್ರಾಚಾರ್ಯರಾದ ಲಾಜರ್ ಸಿರಿಲ್ ಮಾತನಾಡಿ ಗ್ರಾಮೀಣ ಭಾಗದಲ್ಲಿ ಈ ತರಹ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳುವ ಸಪ್ತಗಿರಿ ಆಸ್ಪತ್ರೆಯ ಸೇವೆ ಶ್ಲಾಘನೀಯ ಎಂದು ತಿಳಿಸಿದರು, ಕಾರ್ಯಕ್ರಮದಲ್ಲಿ ಸಪ್ತಗಿರಿ ಆಸ್ಪತ್ರೆಯ ವೈದ್ಯರುಗಳಿಗೆ ಮತ್ತು ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ನ ಪ್ರಾಚಾರ್ಯರು ಮತ್ತು ಉಪನ್ಯಾಸಕರಿಗೆ ಸನ್ಮಾನ ಮಾಡಿ ಗೌರವಿಸಲಾಯಿತು, ಇದೇ ಸಂದರ್ಭದಲ್ಲಿ ಇರ್ಫಾನ್ ಕೆ ಅತ್ತಾರ್ ಅಧ್ಯಕ್ಷರು ಸನ್ ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಟ್ ಸಿಂದನೂರು ಇವರು ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳ ಕಾರ್ಯ ವೈಖರಿಗಳನ್ನು ವೀಕ್ಷಿಸಿ ಪ್ರಶಂಸೆ ವ್ಯಕ್ತಪಡಿಸಿದರು, ಈ ಶಿಬಿರದಲ್ಲಿ ಭಾಗವಹಿಸುವ ರೋಗಿಗಳಿಗೆ ಉಚಿತವಾಗಿ ಊಟದ ವ್ಯವಸ್ಥೆಯನ್ನು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೂ ಸತ್ಯಸಾಯಿ ಸೇವಾ ಸಮಿತಿ ಪಗಡೆದಿನ್ನಿ ಪೈ ಕ್ಯಾಂಪ್ ವತಿಯಿಂದ ಏರ್ಪಡಿಸಲಾಗಿತ್ತು, ಉಚಿತ ಆರೋಗ್ಯ ತಪಾಸಣೆಯ ಉಸ್ತುವಾರಿಯನ್ನು ಶ್ರೀ ಚಿಟ್ಟೂರಿ ಶ್ರೀನಿವಾಸ್ ( ವಾಸು) ಸಂಚಾಲಕರು ಅಖಿಲ ಕರ್ನಾಟಕ ಕಮ್ಮ ಯುವಶಕ್ತಿ ಪಿ ಡಬ್ಲ್ಯೂ ಡಿ ಕ್ಯಾಂಪ್ ಸಿಂಧನೂರು, ಶ್ರೀ ಸುಭಾಷ್ ಚಂದ್ರ ಬೋಸ್ ಅಧ್ಯಕ್ಷರು ರಾಯಚೂರು ಜಿಲ್ಲಾ ಶ್ರೀ ಸತ್ಯಸಾಯಿ ಆರ್ಗನೈಜೇಷನ್, ಶ್ರೀ ಬಿ ಶ್ರೀನಿವಾಸ್ ರೆಡ್ಡಿ ಅಧ್ಯಕ್ಷರು ಶ್ರೀ ಸತ್ಯಸಾಯಿ ಸೇವಾ ಸಮಿತಿ ಪಗಡದಿನ್ನಿ ಪೈ ಕ್ಯಾಂಪ್ ಕಮ್ಮ ರಾಮಕೃಷ್ಣ ಶ್ರೀ ಸತ್ಯ ಸಾಯಿ ಸೇವಾ ಸಮಿತಿ ಇವರುಗಳು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದರು ಸಪ್ತಗಿರಿ ಆಸ್ಪತ್ರೆ ವೈದ್ಯರು ಸತ್ಯಸಾಯಿ ಸೇವಾ ಸಮಿತಿ ಸನ್ ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಶನ್ ನ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು.

# ಸರ್ವಧರ್ಮ ಸೇವಾ ವೆಲ್ಫೇರ್ ಟ್ರಸ್ಟ್ ವತಿಯಿಂದ ಕ್ರಿಸ್‌ಮಸ್ ಹಬ್ಬದ ಅಂಗವಾಗಿ ಬೆಡ್ ಶೀಟ್ ಗಳನ್ನು ಹಂಚುವ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಕಲ್ಯಾಣ ಕರ್ನಾಟಕ ಸಾರಿಗೆ ಇಲಾಖೆಯ ಬಸ್ ನಿಲ್ದಾಣದ ಆವರಣದಲ್ಲಿ ಸರ್ವಧರ್ಮ ಸೇವಾ ವೆಲ್ಫೇರ್ ಟ್ರಸ್ಟ್ ವತಿಯಿಂದ ಕ್ರಿಸ್‌ಮಸ್ ಹಬ್ಬದ ಅಂಗವಾಗಿ ನಡೆದ ಸಮಾಜಸೇವ ಕಾರ್ಯಕ್ರಮಕ್ಕೆ ಕಲ್ಮಠದ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಚಾಲನೆ ನೀಡಿ ಮಾತನಾಡಿ ಜಗತ್ತಿನ ಎಲ್ಲಾ ಧರ್ಮಗಳು ಮನುಷ್ಯರನ್ನು ದುಖಃದಿಂದ ಪಾರು ಮಾಡುವುದಕ್ಕಾಗಿಯೇ ವಿವಿಧ ಧರ್ಮಗಳು ಹುಟ್ಟಿದವು ನಾಡಿನ ಅನೇಕ ಮಹಾತ್ಮರು ತಮಗಾಗಿ ಬದುಕದೆ ಜಾತಿ,ಧರ್ಮ,ಬೇದವಿಲ್ಲದೆ ಎಲ್ಲಾ ಧರ್ಮದ ದಿನದಲಿತರ ಕಲ್ಯಾಣಕ್ಕಾಗಿ ಶ್ರಮಿಸಿದ್ದಾರೆ.**

ಅದರಂತೆ ಸರ್ವಧರ್ಮ ಸೇವಾ ವೆಲ್ಫೇರ್ ಟ್ರಸ್ಟ್ ವತಿಯಿಂದ ಕ್ರಿಸ್‌ಮಸ್ ಹಬ್ಬದ ಅಂಗವಾಗಿ ಬಡವರಿಗೆ ಅನ್ನದಾನ ಹಾಗೂ ಬೆಡ್ ಶೀಟ್ ಗಳನ್ನು ವಿತರಿಸುವ ಮೂಲಕ ಸಂಸ್ಥೆಯ




ಅಧ್ಯಕ್ಷರಾದ ಹನುಮಂತಕೋಟೆಯವರು ನಿರಂತರವಾಗಿ ಜನಸೇವೆಯನ್ನು ಮಾಡುತ್ತ ಬಂದಿದ್ದಾರೆ ಅವರಿಗೆ ಶ್ರೀಮಠದ ವತಿಯಿಂದ ನಿರಂತರವಾಗಿ ಸಹಕಾರವನ್ನು ನೀಡುತ್ತ ಬಂದಿದೇವೆ ಪ್ರತಿಯೊಬ್ಬರು ಕೂಡ ಧರ್ಮದ ಹೆಸರಿನಲ್ಲಿ ಸಮಾಜದ ಸ್ವಸ್ಥ ?ಯವನ್ನು ಕದಡುವ ಕೇಲಸವನ್ನು ಮಾಡದೆ ಎಲ್ಲಾ ಜನರು ಕೂಡಿ ಕೊಂಡು ಸಮಾಜ ಮುಖಿಯಾದ ಕಾರ್ಯಗಳನ್ನು ಹಮ್ಮಿಕೊಳ್ಳುವ ಮೂಲಕ ಸಮಾಜದಲ್ಲಿ ಶಾಂತಿ ಸೌಹಾರ್ಧತೆ ಮೂಡಿಸುವ ಕಾರ್ಯವನ್ನು ಮಾಡಬೇಕು ಎಂದು ತಿಳಿಸಿದರು.

ಪಟ್ಟಣದ ಬಸ್ ನಿಲ್ದಾಣದಲ್ಲಿನ ವೃದ್ದರಿಗೆ ಹಾಗೂ ಅಂಗವಿಕಲರಿಗೆ, ಅನಾಥರಿಗೆ ಚಳಿ ಹೆಚ್ಚಾಗಿರುವ ಕಾರಣ ಬೆಡ್ ಶೀಟ್ ಗಳನ್ನು, ವಸ್ತ್ರಗಳನ್ನು ವಿತರಿಸಲಾಯಿತು. ಬಡಜನರಿಗೆ ಅನ್ನದಾನ ಕಾರ್ಯಕ್ರಮ ಕೂಡ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಮುಸ್ಲಿಂ ಧರ್ಮದ ಗುರುಗಳಾದ ಸೈಯದ್ ಶಾಹ ಸಜ್ಜದ್ ಹುಸೇನಿ ಮತ್ವಲೇ, ತುಮಕುರಿನ ಫಾ.ಜಾಯ್ ಕೆ.ಪೀಟ–ರ್ ಮಾರೇಶ ಫಾಸ್ಟರ್, ಸರ್ವಧರ್ಮ ಸೇವಾ ವೆಲ್ಫೇರ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷರಾದ ಹನುಮಂತ ಕೋಟೆ, ಈರೇಶ್ ಹುಲಿಗುಂಚಿ, ಹನುಮಣತ ಜೆ.ಸಿರವಾರ, ಶರಣು ಮುದ್ದನಗುಡ್ಡಿ, ಭಾರತೀಯ ಸೇವಾ ಸಮಿತಿ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷರಾದ ಸಾಹೀರಭಾನು, ಗುಲಾಂ ಹುಸೇನ್, ತಾ. ಟೈಲರ್ ಸಂಘದ ಅಧ್ಯಕ್ಷರಾದ ಮೆಹಬೂಬ್‌ಸೇರಿದಂತೆ ಇನ್ನಿತರರು ಇದ್ದರು.

# ತೊಗರಿ ಖರೀದಿ ಸಿದ್ಧತೆಗೆ ಸೂಚನೆ



ನೈಜ್ಯ ದೆಸೆ ನ್ಯೂಸ್

**ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಗುಣಮಟ್ಟದ ತೊಗರಿ ಖರೀದಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ತಿಳಿಸಿದ್ದಾರೆ. ನೂತನ ಜಿಲ್ಲಾಡಳಿತ ಭವನದಲ್ಲಿ ಶುಕ್ರವಾರ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸಭೆ ನಡೆಸಿದ ಅವರು ಮಾತನಾಡಿದರು. '2025–26ನೇ ಸಾಲಿನ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ತೊಗರಿ ಖರೀದಿಗೆ ರಾಜ್ಯ ಸರ್ಕಾರ ಆದೇಶಿಸಿದೆ.**

ಪ್ರತಿ ಕ್ವಿಂಟಲ್‌ಗೆ ?8 ಸಾವಿರದಂತೆ ಪ್ರತಿ ಎಕರೆಗೆ 4 ಕ್ವಿಂಟಲ್‌ನಂತೆ ತೊಗರಿ ಖರೀದಿಸಲಾಗುತ್ತದೆ. ಬೆಂಬಲ ಯೋಜನೆಯಡಿ ಖರೀದಿ ಕೇಂದ್ರಗಳನ್ನು ಸ್ಥಾಪಿಸಿ, ಫ್ರೂಟ್ಸ್ ತಂತ್ರಾಂಶದ ಆಧಾರದ ಮೇಲೆ ರೈತ–ರಿಂದ ಖರೀದಿಸಬೇಕು' ಎಂದು ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. 'ನೋಂದಣಿ ಕಾರ್ಯ 80 ದಿನಗಳ ವರೆಗೆ ನಡೆಯಲಿದೆ. ಖರೀದಿ ಪ್ರಕ್ರಿಯೆ 90 ದಿನಗಳವರೆಗೆ ನಡೆಯಲಿದೆ. ಗೋದಾಮುಗಳನ್ನು ಶುದ್ಧವಾಗಿಟ್ಟುಕೊಳ್ಳಬೇಕು. ಮೂಲಸೌಕರ್ಯವುಳ್ಳ ಖರೀದಿ ಕೇಂದ್ರಗಳ ಸ್ಥಾಪನೆಗೆ ಅಗತ್ಯ ಸಿದ್ಧತೆ ಕೈಗೊಳ್ಳಬೇಕು. ತೂಕ ಪ್ರಮಾಣೀಕತೆ ಸೇರಿದಂತೆ ಬೇಕಾದ ಎಲ್ಲ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು' ಎಂದು ಸೂಚನೆ ನೀಡಿದರು.

'ನೋಂದಣಿ ವೇಳೆ ರೈತರು ಆಧಾರ್ ಕಾರ್ಡ್, ಪಹಣಿ ಪ್ರತಿ, ಆಧಾರ್ ಲಿಂಕ್ ಆಗಿರುವ ರಾಷ್ಟ್ರೀಕೃತ ಬ್ಯಾಂಕಿನ ಪಾಸ್‌ಬುಕ್ ಜೆರಾಕ್ಸ್ ಪ್ರತಿ ಸಲ್ಲಿಸಬೇಕು. ಖರೀದಿ ಕೇಂದ್ರಗಳಲ್ಲಿ ಪಿ.ಒ.ಎಸ್ ಯಂತ್ರದ ಮೂಲಕ ರೈತರ ನೋಂದಣಿ ಹಾಗೂ ಖರೀದಿ ಪ್ರಕ್ರಿಯೆಯಲ್ಲಿ ಆಧಾರ್ ಬಯೋ ಮೆಟ್ರಿಕ್ ಪಡೆಯುವುದು ಕಡ್ಡಾಯ. ರೈತರು ಇದಕ್ಕೆ ಸಹಕರಿಸಬೇಕು' ಎಂದರು. ರೈತರು ಫ್ರೂಟ್ಸ್ ಐ.ಡಿಯೊಂದಿಗೆ ತಮ್ಮ ಹತ್ತಿರದ ಖರೀದಿ ಕೇಂದ್ರಗಳಲ್ಲಿ ನೋಂದಾಯಿಸಿಕೊಳ್ಳುವ ಕುರಿತು ರೈತರಿಗೆ ಮಾಹಿತಿ ಒದಗಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. 'ರೈತರ ಹೆಸರಿನ ಆಧಾರ ಸಂಖ್ಯೆ ಜೋಡಣೆಗೊಂಡ ಬ್ಯಾಂಕ್ ಖಾತೆಗೆ ಮಾತ್ರ ಡಿಬಿಟಿ ಮೂಲಕ ಹಣ ಜಮೆ ಆಗಲಿದ್ದು, ರೈತರು ಕಡ್ಡಾಯವಾಗಿ ಎಫ್‌ಐಡಿ ಮತ್ತು ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆ ಮಾಡಿಕೊಳ್ಳುವಂತೆ ತಿಳಿಸಬೇಕು' ಎಂದರು.

ಕೃಷಿ ಮಾರಾಟ ಇಲಾಖೆಯ ಉಪನಿರ್ದೇಶಕ ಓಂಕಾರಯ್ಯ, ಕೃಷಿ ಜಂಟಿ ನಿರ್ದೇಶಕ ಸೋಮಸುಂದರ್, ಸಹಕಾರ ಇಲಾಖೆಯ ಉಪನಿಬಂಧಕ ವೀರಭದ್ರಯ್ಯ, ಕಾನೂನು ಮಾಪನ ಶಾಸ್ತ್ರ ಇಲಾಖೆಯ ನಿರೀಕ್ಷಕ ಮನೋಜ್ ಕುಮಾರ್ ಸೇರಿದಂತೆ ಖರೀದಿ ಎಜೆನ್ಸಿಗಳ ಅಧಿಕಾರಿಗಳು ಇದ್ದರು.

# ಕರ್ನಾಟಕದಲ್ಲಿ ಹೊಚ್ಚುತ್ತಿರುವ ಚಳಿ ;5 ಜಿಲ್ಲೆಗಳಿಗೆ ಆರೆಂಜ್ ಅಲರ್ಟ್

ನೈಜ್ಯ ದೆಸೆ ನ್ಯೂಸ್

**ರಾಜ್ಯದ ಜನರಿಗೆ ತೀವ್ರ ಚಳಿಯ ಅನುಭವವಾಗುತ್ತಿದೆ. 5 ಜಿಲ್ಲೆಗಳಿಗಂತೂ ಹೆಚ್ಚಿನ ಚಳಿ ಇರಲಿದ್ದು, ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಿಸಿದೆ. ಶೀತದ ಅಲೆಯ (Karnataka Weather Forecast) ಪ್ರಭಾವ ಹೆಚ್ಚಾಗಿದ್ದರಿಂದಾಗಿ ಜನಜೀವನ ಗಢಗಢ ನಡಗುತ್ತಿದೆ. ಬೆಂಗಳೂರಿನಲ್ಲೂ ಮೈಕೊರೆಯುವ ಚಳಿ ಇದೆ. ಇಂದು ಕಲಬುರಗಿ, ರಾಯಚೂರು ಸೇರಿದಂತೆ 5 ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ (Orange alert) ಘೋಷಿಸಿರುವ ಇಲಾಖೆ, 10 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಿದೆ.**

ಉತ್ತರ ಒಳನಾಡಿನ ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಚಳಿಯ ಪ್ರಮಾಣ ಹೆಚ್ಚಿರಲಿದ್ದು, ಆರೆಂಜ್ ಅಲರ್ಟ್



ಘೋಷಿಸಲಾಗಿದೆ. ಅಲ್ಲದೇ, ಉತ್ತರ ಒಳನಾಡಿನ ಬೆಳಗಾವಿ, ಬಾಗಲಕೋಟೆ, ಕೊಪ್ಪಳ, ಗದಗ, ಧಾರವಾಡ, ಹಾವೇರಿ, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ದಕ್ಷಿಣ ಒಳನಾಡಿನ ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ಮಂಡ್ಯ, ರಾಮನಗರ, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಕೊಡಗು, ಚಾಮರಾಜನಗರ, ಮೈಸೂರು, ತುಮಕೂರು ಮತ್ತು ವಿಜಯನಗರ ಜಿಲ್ಲೆಗಳಲ್ಲಿಯೂ ಒಣ ಹವೆ ಇರಲಿದೆ ಎನ್ನಲಾಗಿದೆ.

ಉತ್ತರ ಒಳನಾಡಿನ ಬೆಳಗಾವಿ, ಬೀದರ್, ವಿಜಯಪುರ, ಬಾಗಲಕೋಟೆ, ಹಾವೇರಿ, ಗದಗ, ಧಾರವಾಡ, ಕಲಬುರಗಿ, ಕೊಪ್ಪಳ, ಬಳ್ಳಾರಿ, ರಾಯಚೂರು, ಯಾದಗಿರಿ ಮತ್ತು ವಿಜಯನಗರದಲ್ಲಿ ಕಳೆದ ಹಲವು ದಿನಗಳಿಂದ ಒಣಹವೆಯ ವಾತಾವರಣವಿದ್ದು, ಮುಂದುವರೆಯಲಿದೆ. ಕರಾವಳಿಯ ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಒಣ ಹವೆಯಿರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಶೀತದ ಅಲೆಯ (Karnataka Weather Forecast) ಪ್ರಭಾವ ಹೆಚ್ಚಾಗಿದ್ದರಿಂದಾಗಿ ಜನಜೀವನ ಗಢಗಢ ನಡಗುತ್ತಿದೆ. ಬೆಂಗಳೂ–ರಿನಲ್ಲೂ ಮೈಕೊರೆಯುವ ಚಳಿ ಇದೆ. ಇಂದು ಕಲಬುರಗಿ, ರಾಯಚೂರು ಸೇರಿದಂತೆ 5 ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ (Orange alert)ಘೋಷಿಸಿರುವ ಇಲಾಖೆ, 10 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಿದೆ.

# TGAMC 2025 ಹಲವು ಹುದ್ದೆಗಳಿಗೆ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ನೇಮಕಾತಿ ಸಂಸ್ಥೆ: ತಾರಾನಾಥ್ ಸರ್ಕಾರಿ ಅಯುರ್ವೇದ ಮೆಡಿಕಲ್ ಕಾಲೇಜು & ಆಸ್ಪತ್ರೆ ಒಟ್ಟು ಹುದ್ದೆ: 18 ಉದ್ಯೋಗದ ಸ್ಥಳ: ಬಳ್ಳಾರಿ ಹುದ್ದೆಯ ಹೆಸರು: ಪ್ರೊಫೆಸರ್, ಸ್ಟಾಫ್ ನರ್ಸ್ ವಿದ್ಯಾರ್ಹತೆ: ಅರ್ಹ ಅಭ್ಯರ್ಥಿಗಳು ಯಾವುದೇ ಅಧಿಕೃತ ವಿವಿಯಿಂದ ಎಂಬಿಬಿ–ಎಸ್, ಡಿಪ್ಲೊಮಾ, ಮಾಸ್ಟರ್ಸ್ , ಬಿಎಎಂ–**




ಎಸ್, ಎಂಡಿ, ಎಂಎಸ್ ಪದವಿ ಪಡೆದಿರಬೇಕು. ವಯೋಮಿತಿ: ಆಯುರ್ವೇದ ಅಸಿಸ್ಟೆಂಟ್ ಪ್ರೊಫೆಸರ್: ಕನಿಷ್ಠ 21ರಿಂದ 35 ವರ್ಷ ಆಯುರ್ವೇದ ಪ್ರೊಫೆಸರ್: ಕನಿಷ್ಠ 21ರಿಂದ 45 ವರ್ಷ ಅರ್ಜಿ ಶುಲ್ಕ: ಇಲ್ಲ ಆಯ್ಕೆ ಪ್ರಕ್ರಿಯೆ: ದಾಖಲಾತಿ ಪರಿಶೀಲನೆ, ಸಂದರ್ಶನ, ಅರ್ಜಿ ಸಲ್ಲಿಕೆ ಹೇಗೆ: ಅರ್ಹ ಅಭ್ಯರ್ಥಿಗಳು ನಿಗದಿತ ಅರ್ಜಿ ಫಾರಂನಲ್ಲಿ ಮಾಹಿತಿಯನ್ನು ಬರೆದು, ಸೂಕ್ತ ದಾಖಲೆಯೊಂದಿಗೆ ಅಂಚೆ ಮೂಲಕ ಕಳುಹಿಸಬೇಕು.

ಅಂಚೆ ವಿಳಾಸ: Principal, Taranath Govt. Ayurvedic Medical College & Hospital, Dr. Rajkumar Road, Ballari-583101. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: 30–12–2025 ಹೆಚ್ಚಿನ ಮಾಹಿತಿಗೆ: tgamcballari.org

# ಬಳ್ಳಾರಿ ಜಿಲ್ಲಾ ಯೋಜನಾ ಸಮಿತಿ ಸದಸ್ಯರ ಚುನಾವಣೆ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ: ಬಳ್ಳಾರಿ ಜಿಲ್ಲಾ ಯೋಜನಾ ಸಮಿತಿಗೆ ಪುರಸಭಾ ಕ್ಷೇತ್ರದಿಂದ ಚುನಾಯಿತ ಸದಸ್ಯರನ್ನು ಆಯ್ಕೆ ಮಾಡುವ ಚುನಾವಣಾ ವೇಳಾಪಟ್ಟಿ ಪ್ರಕಟವಾಗಿದೆ. ಚುನಾವಣಾಧಿಕಾರಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ತಿಳಿಸಿದ್ದಾರೆ.**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 310ರ ಪ್ರಕಾರ ಜಿಲ್ಲಾ ಯೋಜನಾ ಸಮಿತಿ ರಚಿಸಬೇಕಾಗಿದ್ದು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಜಿಲ್ಲಾ ಯೋಜನಾ ಸಮಿತಿ ಸದಸ್ಯರುಗಳ ಚುನಾವಣೆ) ನಿಯಮಗಳು 1996ರ 8ರ ನಿಯಮದ ಪ್ರಕಾರ ಬಳ್ಳಾರಿ ಜಿಲ್ಲಾ ಯೋಜನಾ ಸಮಿತಿಗೆ ಪುರಸಭಾ ಮತಕ್ಷೇತ್ರಗಳಿಂದ ಪ್ರತ್ಯೇಕವಾಗಿ ಸದಸ್ಯರ ಆಯ್ಕೆ ಕುರಿತು ಚುನಾವಣೆ ನಡೆಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಚುನಾವಣಾ ವೇಳಾಪಟ್ಟಿ : ಪುರಸಭಾ ಕ್ಷೇತ್ರದಿಂದ ಚುನಾಯಿಸಬೇಕಾದ ಸದಸ್ಯರುಗಳ ಸಂಖ್ಯೆ: ಪುರಸಭಾ ಕ್ಷೇತ್ರದಿಂದ – 23 ಸದಸ್ಯರು (ನಗರಸಭೆ,ಪುರಸಭೆ,ಪಟ್ಟಣ ಪಂಚಾಯತ್, ಮಹಾನಗರ ಪಾಲಿಕೆ ಚುನಾಯಿತ ಸದಸ್ಯರುಗಳು). ನಾಮಪತ್ರ ಸ್ವೀಕರಿಸುವ ದಿನಾಂಕ, ಸಮಯ ಮತ್ತು



ಸ್ಥಳ(ಸಾರ್ವಜನಿಕ ರಜಾದಿನ ಹೊರತುಪಡಿಸಿ): ಡಿ.22 ರಿಂದ 31 ರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 03 ಗಂಟೆಯವರೆಗೆ, ಸ್ಥಳ: ಜಿಲ್ಲಾ ಪಂಚಾಯತ್ ನ ಪಿಎಇಒ ಕೊಠಡಿ ಯೋಜನಾ ಶಾಖೆ.

ನಾಮಪತ್ರ ಪರಿಶೀಲಿಸುವ ದಿನಾಂಕ, ದಿನ, ಸಮಯ ಮತ್ತು ಸ್ಥಳ: 2026 ರ ಜನವರಿ 02 (ಶುಕ್ರವಾರ) ಬೆಳಿಗ್ಗೆ 11 ಗಂಟೆಗೆ, ಸ್ಥಳ: ಜಿಲ್ಲಾ ಪಂಚಾಯತ್ ನ ಪಿಎಇಒ ಕೊಠಡಿ ಯೋಜನಾ ಶಾಖೆ. ನಾಮಪತ್ರ ಹಿಂಪಡೆಯುವ ಕೊನೆ ದಿನಾಂಕ, ದಿನ ಮತ್ತು ಸಮಯ: 2026 ರ ಜನವರಿ 05 (ಸೋಮವಾರ) ಮಧ್ಯಾಹ್ನ 03 ಗಂಟೆಯವರೆಗೆ, ಸ್ಥಳ: ಜಿಲ್ಲಾ ಪಂಚಾಯತ್ ನ ಪಿಎಇಒ ಕೊಠಡಿ ಯೋಜನಾ ಶಾಖೆ. ಮತದಾನ ಅಗತ್ಯವಾದಲ್ಲಿ ಮತದಾನ ನಡೆಸಬೇಕಾದ ದಿನಾಂಕ, ದಿನ, ಸಮಯ ಮತ್ತು ಸ್ಥಳ: 2026 ರ ಜನವರಿ 12(ಸೋಮವಾರ) ಬೆಳಿಗ್ಗೆ 09 ರಿಂದ ಸಂಜೆ 04 ರ ವರೆಗೆ, ಸ್ಥಳ: ಜಿಲ್ಲಾ ಪಂಚಾಯತ್ ನಜೀರ್ ಸಭಾಂಗಣ.

ಮತ ಎಣಿಕೆ ದಿನಾಂಕ, ಸಮಯ ಮತ್ತು ಸ್ಥಳ: 2026 ರ ಜನವರಿ 12(ಸೋಮವಾರ) ಸಂಜೆ 05 ಗಂಟೆಗೆ, ಸ್ಥಳ: ಜಿಲ್ಲಾ ಪಂಚಾಯತ್ ನಜೀರ್ ಸಭಾಂಗಣ. 2026 ರ ಜನವರಿ 13 (ಮಂಗಳವಾರ) ಸಂಜೆ 05 ಗಂಟೆಗೆ ಚುನಾವಣೆ ಪ್ರಕ್ರಿಯೆ ಮುಕ್ತಾಯಗೊಳ್ಳಲಿದೆ ಎಂದು ಚುನಾವಣಾಧಿಕಾರಿ ಆಗಿರುವ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ತಿಳಿಸಿದ್ದಾರೆ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### MDಅಮ್ರಾಜ್-ಎ-ಐನ್, ಉಜ್ನ್, ಅನಾಫ್ ವ ಹಲಾಕ್"

"MD ಅಮ್ರಾಜ್-ಎ-ಐನ್, ಉಜ್ನ್, ಅನಾಫ್ ವ ಹಲಾಕ್" "MD Amraz-e-Ain, Uzn, Anaf wa Halaq" ಯುನಾನಿ ವೈದ್ಯಕೀಯದಲ್ಲಿ ಸ್ನಾತಕೋತ್ತರ ವಿಶೇಷ ಕಾರ್ಯಕ್ರಮವಾಗಿದ್ದು, ಇದು ಓಟೋರಿನೋಲ-ರಿಂಗೋಲಜಿ (ENT) ಮತ್ತು ನೇತ್ರವಿಜ್ಞಾನದಲ್ಲಿ ಆಧುನಿಕ MD/MS ಗೆ ಸಮಾನವಾಗಿದೆ. ಈ ಹೆಸರು ಉರ್ದು/ಅರೇಬಿಕ್ ನುಡಿಗಟ್ಟು, ಇದನ್ನು ಹೀಗೆ ಅನುವಾದಿಸಲಾಗುತ್ತದೆ:
ಅಮ್ರಾಜ್-ಎ-ಐನ್: ಕಣ್ಣಿನ ರೋಗಗಳು (ನೇತ್ರವಿಜ್ಞಾನ)
ಉಜ್ನ್: ಕಿವಿ (ಓಟೋರಿನೋಲರಿಂಗೋಲಜಿಯ ಭಾಗ)
ಅನಾಫ್: ಮೂಗು (ಓಟೋರಿನೋಲರಿಂಗೋಲಜಿಯ ಭಾಗ)
ಹಲಾಕ್: ಗಂಟಲು (ಓಟೋರಿನೋಲರಿಂಗೋಲಜಿಯ ಭಾಗ)
ರಾಷ್ಟ್ರೀಯ ಭಾರತೀಯ ವೈದ್ಯಕೀಯ ವ್ಯವಸ್ಥೆಯ (NCISM) ಆಯೋಗದಿಂದ ನಿಯಂತ್ರಿಸಲ್ಪಡುವ ಈ ಮೂರು ವರ್ಷಗಳ ಕೋರ್ಸ್, ಸಾಂಪ್ರದಾಯಿಕ ಯುನಾನಿ ತತ್ವಗಳನ್ನು ಸಮಕಾಲೀನ ವೈದ್ಯಕೀಯ ರೋಗನಿರ್ಣಯ ಸಾಧನಗಳು ಮತ್ತು ಚಿಕಿತ್ಸಾ ವಿಧಾನಗಳೊಂದಿಗೆ ಸಂಯೋಜಿಸುತ್ತದೆ, ಈ ನಿರ್ದಿಷ್ಟ ಕ್ಷೇತ್ರಗಳಲ್ಲಿ ರೋಗಿಗಳ ಆರೈಕೆಗೆ ಸಮಗ್ರ ವಿಧಾನಕ್ಕಾಗಿ. ವಿದ್ಯಾರ್ಥಿಗಳು ಸಂಬಂಧಿತ ದೇಹದ ಭಾಗಗಳ ಅಂಗರಚನಾಶಾಸ್ತ್ರ, ಶರೀರಶಾಸ್ತ್ರ ಮತ್ತು ರೋಗಶಾಸ್ತ್ರದ ಬಲವಾದ ಗ್ರಹಿಕೆಯನ್ನು ಬೆಳೆಸಿಕೊಳ್ಳುತ್ತಾರೆ. ನಮ್ಮ ದೇಶದಲ್ಲಿ, ವಿವಿಧ ವೈದ್ಯಕೀಯ ವಿಭಾಗಗಳು ಸಾರ್ವಜನಿಕ ಆರೋಗ್ಯ ಸೇವೆಗಾಗಿ ನಿರಂತರವಾಗಿ ಕೆಲಸ ಮಾಡುತ್ತವೆ ಮತ್ತು ಅವುಗಳಲ್ಲಿ, ಯುನಾನಿ ವೈದ್ಯಕೀಯ ವ್ಯವಸ್ಥೆಯು ಶತಮಾನಗಳಿಂದಲೂ ರಾಷ್ಟ್ರಕ್ಕೆ ಸಲ್ಲಿಸಿದ ಸೇವೆಗಾಗಿ ವಿಶೇಷ ಮನ್ನಣೆಗೆ ಅರ್ಹವಾಗಿದೆ. ನವದೆಹಲಿಯ ರಾಷ್ಟ್ರೀಯ ಭಾರತೀಯ ವೈದ್ಯಕೀಯ ವ್ಯವಸ್ಥೆ (NCISM) ಆಯೋಗವು ಕಣ್ಣು, ಕಿವಿ, ಮೂಗು, ಗಂಟಲು (E.N.T.) ಮತ್ತು ದಂತವೈದ್ಯಶಾಸ್ತ್ರ ಕ್ಷೇತ್ರದಲ್ಲಿ ಪದವಿಪೂರ್ವ ಮಟ್ಟದಲ್ಲಿ ನುರಿತ ಪದವೀಧರರನ್ನು ಉತ್ಪಾದಿಸಲು ಬದ್ಧವಾಗಿದೆ. ಈ ಪಠ್ಯಕ್ರಮವು ವಿದ್ವಾಂಸರು ಮತ್ತು ವೈದ್ಯರನ್ನು ಯುನಾನಿ ವೈದ್ಯಕೀಯ ವ್ಯವಸ್ಥೆಯನ್ನು ಜಾಗತೀಕರಣಗೊಳಿಸಲು ಅಗತ್ಯವಾದ ಸಾಮರ್ಥ್ಯಗಳೊಂದಿಗೆ ಸಜ್ಜುಗೊಳಿಸಲು ವಿನ್ಯಾಸಗೊಳಿಸಲಾಗಿದೆ. ಕಣ್ಣು, ಇ.ಎನ್.ಟಿ. ಮತ್ತು ದಂತವೈದ್ಯಶಾಸ್ತ್ರದ ಅಧ್ಯಯನವು ಯುನಾನಿ ವೈದ್ಯಕೀಯ ವಿಜ್ಞಾನದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ, ಸಂಬಂಧಿತ ಪರಿಸ್ಥಿತಿಗಳ ರೋಗನಿರ್ಣಯ ಮತ್ತು ಚಿಕಿತ್ಸೆಗೆ ಗಮನಾರ್ಹವಾಗಿ ಕೊಡುಗೆ ನೀಡುತ್ತದೆ. ಕಣ್ಣು, ಇ.ಎನ್.ಟಿ. ಮತ್ತು ದಂತವೈದ್ಯಶಾಸ್ತ್ರಕ್ಕಾಗಿ ಸಾಮರ್ಥ್ಯ-ಆಧಾರಿತ ಡೈನಾಮಿಕ್ ಪಠ್ಯಕ್ರಮ (CBDC) ವಿದ್ಯಾರ್ಥಿಗಳಿಗೆ ಕಣ್ಣು, ಇ.ಎನ್.ಟಿ. ಮತ್ತು ದಂತವೈದ್ಯಶಾಸ್ತ್ರದ ಅಸ್ವಸ್ಥತೆಗಳನ್ನು ಪತ್ತೆಹಚ್ಚುವ ಮತ್ತು ನಿರ್ವಹಿಸುವಲ್ಲಿ ಸಮಗ್ರ ಅಡಿಪಾಯವನ್ನು ಒದಗಿಸಲು ವಿನ್ಯಾಸಗೊಳಿಸಲಾಗಿದೆ. ಇದು ಸೈದ್ಧಾಂತಿಕ ಜ್ಞಾನ ಮತ್ತು ಪ್ರಾಯೋಗಿಕ ವೈದ್ಯಕೀಯ ಅನುಭವದ ಸಮತೋಲಿತ ಏಕೀಕರಣವನ್ನು ಒತ್ತಿಹೇಳುತ್ತದೆ, ಕಣ್ಣು, ಇ.ಎನ್.ಟಿ. ಮತ್ತು ದಂತವೈದ್ಯಶಾಸ್ತ್ರದ ಸ್ಥಿತಿಗಳ ಸಮಗ್ರ ತಿಳುವಳಿಕೆಗಾಗಿ ಅಗತ್ಯ ಸಾಮರ್ಥ್ಯಗಳ ಮೇಲೆ ಕೇಂದ್ರೀಕರಿಸುತ್ತದೆ. ವಿದ್ಯಾರ್ಥಿಗಳು ಕಣ್ಣು, ಕಿವಿ, ಮೂಗು, ಗಂಟಲು ಮತ್ತು ದಂತವೈದ್ಯಶಾಸ್ತ್ರದ ಅಂಗರಚನಾಶಾಸ್ತ್ರ, ಶರೀರಶಾಸ್ತ್ರ ಮತ್ತು ರೋಗಶಾಸ್ತ್ರದ ಬಲವಾದ ಗ್ರಹಿಕೆಯನ್ನು ಬೆಳೆಸಿಕೊಳ್ಳಬೇಕೆಂದು ನಿರೀಕ್ಷಿಸಲಾಗಿದೆ, ಜೊತೆಗೆ ರೋಗನಿರ್ಣಯ ಸಾಧನಗಳು ಮತ್ತು ಚಿಕಿತ್ಸಾ ವಿಧಾನಗಳನ್ನು ಕರಗತ ಮಾಡಿಕೊಳ್ಳುತ್ತಾರೆ. ಸಾರ್ವಜನಿಕ ಆರೋಗ್ಯಕ್ಕೆ ನಿರ್ಣಾಯಕವಾದ ತಡೆಗಟ್ಟುವ ಆರೈಕೆ ಮತ್ತು ರೋಗಿಯ ಶಿಕ್ಷಣದ ಮಹತ್ವವನ್ನು ಪಠ್ಯಕ್ರಮವು ಎತ್ತಿ ತೋರಿಸುತ್ತದೆ. ಸಾಂಪ್ರದಾಯಿಕ ಔಷಧದ ಅತ್ಯಂತ ಹಳೆಯ ರೂಪಗಳಲ್ಲಿ ಒಂದಾದ ಯುನಾನಿ ವ್ಯವಸ್ಥೆಯು ನಾಲ್ಕು ದ್ರವಗಳ (ರಕ್ತ, ಕಫ, ಹಳದಿ ಪಿತ್ತರಸ ಮತ್ತು ಕಪ್ಪು ಪಿತ್ತರಸ) ಸಮತೋಲನದ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಒತ್ತು ನೀಡುತ್ತದೆ. ಯುನಾನಿ ತತ್ವಗಳನ್ನು ಆಧುನಿಕ ವೈದ್ಯಕೀಯ ತಂತ್ರಗಳೊಂದಿಗೆ ಸಂಯೋಜಿಸುವ ಮೂಲಕ, ವಿದ್ಯಾರ್ಥಿಗಳು ಸಮಕಾಲೀನ ಪ್ರಗತಿಯ ಜೊತೆಗೆ ಪ್ರಾಚೀನ ಬುದ್ಧಿವಂತಿಕೆಯ ಬಗ್ಗೆ ಮೆಚ್ಚುಗೆಯನ್ನು ಪಡೆಯುತ್ತಾರೆ. ಈ CBDC ಪಠ್ಯಕ್ರಮವು ವಿದ್ಯಾರ್ಥಿಗಳು ಕಣ್ಣು, ಇ.ಎನ್.ಟಿ. ಮತ್ತು ದಂತವೈದ್ಯಶಾಸ್ತ್ರದ ಸ್ಥಿತಿಗಳ ಜ್ಞಾನವನ್ನು ಪಡೆಯುವುದಲ್ಲದೆ, ಯುನಾನಿ ವಿಧಾನಕ್ಕೆ ಅನುಗುಣವಾಗಿ ರೋಗನಿರ್ಣಯ, ರೋಗಿಯ ಆರೈಕೆ ಮತ್ತು ಚಿಕಿತ್ಸಾ ವಿಧಾನಗಳಲ್ಲಿ ಪ್ರಾಯೋಗಿಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದನ್ನು ಖಚಿತಪಡಿಸುತ್ತದೆ. ಈ ಸಾಮರ್ಥ್ಯ ಆಧಾರಿತ ಚೌಕಟ್ಟಿನ ಮೂಲಕ, ಅವರು ಶಾಸ್ತ್ರೀಯ ಯುನಾನಿ ತತ್ವಗಳು ಮತ್ತು ಆಧುನಿಕ ವೈದ್ಯಕೀಯ ಪರಿಕಲ್ಪನೆಗಳನ್ನು ಅನ್ವಯಿಸಲು ಕಲಿಯುತ್ತಾರೆ, ರೋಗಿಗಳ ಆರೈಕೆಗೆ ಸಮಗ್ರ ವಿಧಾನವನ್ನು ಬೆಳೆಸುತ್ತಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಮಾನವೀಯತೆಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಕರುಣೆಯ ಕುಟುಂಬವಾಗಿದೆ ಕಾರುಣ್ಯ ಆಶ್ರಮ: ಕೆ. ವೀರೇಶ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಪ್ಯಾಂಟೆರಾ ಅಗ್ರಿ ಸೈನ್ಸ್ ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ವತಿಯಿಂದ ಸಂಸ್ಥಾಪಕರಾದ ಲೋಕನಾಥನ್ ಗಿರಿಧರನ್ ಹಾಗೂ ನಿರ್ದೇಶಕರಾದ ಪ್ರಮೋದ್ ಕಡುಕೋಳ ಇವರುಗಳ ಆಶಯದಂತೆ ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕಾರುಣ್ಯ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ" ನೊಂದ ಜೀವಿಗಳ ನಾಡಿಮಿಡಿತ"- ಎನ್ನುವ ವಿಶೇಷ ಕಾರ್ಯಕ್ರಮದಡಿಯಲ್ಲಿ ಆಶ್ರಮದಲ್ಲಿ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಈ ಸಂಸ್ಥೆಯ ಸಂಸ್ಥಾಪಕರ ಹಾಗೂ ನಿರ್ದೇಶಕರ ಜನ್ಮ ಸಾರ್ಥಕ ದಿನವನ್ನು ನೆರವೇರಿಸಲಾಯಿತು.**

ಈ ಕಾರ್ಯಕ್ರಮದಲ್ಲಿ ಪ್ಯಾಂಟೇರಾ ಅಗ್ರಿ ಸೈನ್ಸಸ್ ನ ಇಂಡಿಯಾ ಪ್ರೈವೇಟ್ ಲಿಮಿಟೆಡ್ ನ ಜಡ್ ಎಸ್ ಎಮ್ ಗಳಾದ ಕೆ. ವೀರೇಶ ಮಾತನಾಡಿ ನಮ್ಮ ಸಂಸ್ಥೆಯ ಸ್ಥಾಪಕರು ಹಾಗೂ ನಿರ್ದೇಶಕರು ನೆಲೆ ಇಲ್ಲದ ಜೀವಿಗಳ ಬಗ್ಗೆ ಅನಾಥರ ಬಗ್ಗೆ ಬಹಳ ಆಸಕ್ತಿ ಹೊಂದಿದಂತಹ ಇವರುಗಳಿಗೆ ಕಾರುಣ್ಯ ಆಶ್ರಮದ ಹಿರಿಯರ ಹಾಗೂ ವಯಸ್ಕರ ಬುದ್ಧಿಮಾಂಧ್ಯರ ಆಶೀರ್ವಾದ ಸದಾವಕಾಲವಿರಲಿ. ನಮ್ಮ ಚನ್ನಬಸಯ್ಯ ಸ್ವಾಮಿಯವರು ನಿರಂತರ ತಮ್ಮ ಜೋಳಿಗೆಯಿಂದ ಸುಮಾರು ವರ್ಷಗಳಿಂದ ಅನಾಥರಿಗೆ ಆಶ್ರಯ ಕಲ್ಪಿಸಿ ಮತ್ತು ಅನೇಕ ಹಲವಾರು ಜಾಗೃತಿಗಳ ಮೂಲಕ ಸಮಾಜವನ್ನು ಶುದ್ಧೀಕರಿಣ ಮಾಡುವಂತಹ ಕಾರ್ಯಕ್ಕೆ ಮುಂದಾಗಿರುವುದು ನಮ್ಮ ಭಾರತೀಯ ಸಂಸ್ಕೃತಿಗೆ ಹೆಮ್ಮೆಯ ವಿಷಯವಾಗಿದೆ. ಮನುಕುಲದ ಮಾನವೀಯತೆಯ ಮಂದಿರವಾಗಿದೆ ಈ ನಮ್ಮ ಕಾರುಣ್ಯ ಆಶ್ರಮ.



ಇಂತಹ ಮಂದಿರದಲ್ಲಿ ಆಶ್ರಯ ಪಡೆದಿರುವವರು ಶರಣ ಸ್ವರೂಪಿಗಳು ದೇವರ ಸಮಾನರು ಮಾನವೀಯತೆ ಮೌಲ್ಯಗಳನ್ನು ಎತ್ತಿ ಹಿಡಿಯುವ ಕರುಣೆಯ ಕುಟುಂಬವಾಗಿದೆ ಕಾರುಣ್ಯ ಆಶ್ರಮ ಈ ಆಶ್ರಮಕ್ಕೆ ನಮ್ಮ ಕಂಪನಿಯು ಕೈ ಜೋಡಿಸುತ್ತದೆ. ಎಂದು ಮಾತನಾಡಿದರು ನಂತರ ಇವರನ್ನು ಆಶ್ರಮದವತಿಯಿಂದ ಸನ್ಮಾನಿಸಿ ಗೌರವಿಸಿ ಸಿದ್ದಗಂಗಾ ಶ್ರೀಗಳ ಭಾವಚಿತ್ರವನ್ನು ನೆನಪಿನ ಕಾಣಿಕೆಯಾಗಿ ವಿತರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪ್ಯಾಂಟೆರಾ ಅಗ್ರಿ ಸೈನ್ಸ್ ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ನ ಪದಾಧಿಕಾರಿಗಳಾದ ನರೇಂದ್ರ. ವಿರೂಪಾಕ್ಷಪ್ಪ ಮಾನವಿ. ಪಾಲಾಕ್ಷಿ. ರಮೇಶ. ರಾಘವೇಂದ್ರರಾಜ. ನರೇಂದ್ರ ಹಾಗೂ ಆಶ್ರಮದ ಆಡಳಿತಾಧಿಕಾರಿಗಳಾದ ಅವಿನಾಶ ದೇಶಪಾಂಡೆ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸಯ್ಯ ಸ್ವಾಮಿ ಹಿರೇಮಠ. ಶ್ರೀಮಠ ಸೇವಾ ಟ್ರಸ್ಟ್ ನ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ. ಮರಿಯಪ್ಪ.. ಜ್ಯೋತಿ. ಅನೇಕರು ಉಪಸ್ಥಿತರಿದ್ದರು.

# ಆಲ್ಕೋಡ್ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಬೇಟಿ ಬಚಾವೊ, ಬೇಟಿ ಪಡಾವೊ ಜಾಗೃತಿ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 20 (ಕರ್ನಾಟಕ ವಾರ್ತೆ): ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ ಮತ್ತು ಜಿಲ್ಲಾ ಮಹಿಳಾ ಸಬಲೀಕರಣ ಘಟಕ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ದೇವದುರ್ಗ ತಾಲೂಕಿನ ಆಲ್ಕೋಡ್ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಕೇಂದ್ರ ಸರ್ಕಾರದ ಬೇಟಿ ಬಚಾವೊ, ಬೇಟಿ ಪಡಾವೊ ಯೋಜನೆಯ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮವು ಇತ್ತೀಚಿಗೆ ನಡೆಯಿತು.**

ಈ ವೇಳೆ ಮಿಷನ್ ಶಕ್ತಿ ಯೋಜನೆಯ ಜಿಲ್ಲಾ ಸಂಯೋಜಕರಾದ ಬಾವಸಲಿ ಅವರು ಮಾತನಾಡಿ, ಬೇಟಿ ಬಚಾವೊ, ಬೇಟಿ ಪಡಾವೊ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಉತ್ತೇಜಿಸುವುದು, ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟುವುದು, ಲಿಂಗ ತಾರತಮ್ಯ ಹೋಗಲಾಡಿಸುವುದು, ಹೆಣ್ಣು ಮಗುವಿಗೆ ಉಳಿವು ಮತ್ತು ಅವರ ರಕ್ಷಣೆಯನ್ನು ಖಾತ್ರಿಗೊಳಿಸುವುದು, ಹೆಣ್ಣು ಮಗುವಿಗೆ ಪ್ರಾಮುಖ್ಯತೆ ಮತ್ತು ಅವರ ಹಕ್ಕುಗಳ ಧನಾತ್ಮಕ ಸಂದೇಶವನ್ನು ನೀಡುವ ನಿಟ್ಟಿನಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗಿದೆ.





ಪ್ರಮುಖವಾಗಿ ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು. ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾದರೆ ಸಾಮಾಜಿಕ ಪಿಡುಗುಗಳಾದ ಬಾಲ್ಯ ವಿವಾಹ, ಬಾಲ ಕಾರ್ಮಿಕತೆ ಎಂಬ ಅನಿಷ್ಟ ಪದ್ಧತಿಯಲ್ಲಿ ತೊಡಗಿಕೊಳ್ಳುತ್ತಾರೆ. ಬಾಲ್ಯ ವಿವಾಹ ಮತ್ತು ಬಾಲ ಕಾರ್ಮಿಕ ಪದ್ಧತಿ ಶಿಕ್ಷಾರ್ಹ ಅಪರಾಧವಾಗಿದ್ದು ಇದನ್ನು ಪ್ರೋತ್ಸಾಹಿಸುವವರಿಗೆ ಕಠಿಣ ಶಿಕ್ಷೆ ಇದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರಾದ ಭೀಮರಾಯ ಸೇರಿದಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಸತಿ ಶಾಲೆಯ ನಿಲಯ ಪಾಲಕರು, ಸಹ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

# ಬೇಡಿಕೆಯಂತೆ ಮೆಕ್ಕಜೋಳ ಪೂರೈಸಲು ಸೂಚನೆ



❑ ನೈಜ್ಯ ದೆಸೆ ನ್ಯೂಸ್

**ಕೊಪ್ಪಳ: ಪೌಲ್ಟ್ರಿ ಫೀಡ್, ಕೋಳಿ ಫಾರಂಗಳ ಮೂಲಕ ರೈತರ ಮೆಕ್ಕಜೋಳ ಖರೀದಿಸಲು ಜಿಲ್ಲೆಯ ಪ್ರತಿ ಕೋಳಿ ಫಾರಂಗಳ ಬೇಡಿಕೆಯಂತೆ ಪೂರೈಸಲು ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಅವರು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.**

ಗುರುವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇಲಾಖೆ ಅಧಿಕಾರಿಗಳು, ರೈತರು ಹಾಗೂ ಕೋಳಿ ಫಾರ್ಮ್ ಮಾಲೀಕರ ಜೊತೆ ನಡೆದ ಸಭೆಯಲ್ಲಿ ಮಾತನಾಡಿದ ಅವರು 'ಸರ್ಕಾರದ ಆದೇಶದಂತೆ 2025-26ನೇ ಸಾಲಿನ ಬೆಂಬಲ ಬೆಲೆ ಯೋಜನೆಯಡಿ ಮುಂಗಾರು ಹಂಗಾಮಿನಲ್ಲಿ ರೈತರು ಬೆಳೆದ ಮೆಕ್ಕೆಜೋಳವನ್ನು ಪ್ರತಿ ರೈತರಿಂದ 50 ಕ್ವಿಂಟಲ್ ಮೆಕ್ಕೆಜೋಳವನ್ನು ಪ್ರತಿ ಕ್ವಿಂಟಲ್‌ಗೆ ?2400ರಂತೆ ಖರೀದಿ ಸಂಸ್ಥೆಯಾದ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ಮೂಲಕ ಖರೀದಿಸಬೇಕಾಗಿದೆ' ಎಂದರು.

'ಕೋಳಿ ಫಾರಂಗಳ ಆಹಾರ ತಯಾರಿಕೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಮೆಕ್ಕೆಜೋಳವನ್ನು ಬಳಸಲಾಗುತ್ತದೆ. ಹಾಗಾಗಿ ಪ್ರಸಕ್ತ ಸಾಲಿನಲ್ಲಿ ಕೋಳಿ ಫಾರಂಗಳಿಗೆ ಅವಶ್ಯವಿರುವ ಒಟ್ಟಾರೆ ಬೇಡಿಕೆಯನ್ನು ನೀಡಬೇಕು' ಎಂದರು. ಕೋಳಿ ಫಾರಂ ಮಾಲೀಕರ ಪ್ರತಿನಿಧಿಗಳು ಮಾತನಾಡಿ ಒಟ್ಟು ಮೂರು ಸಾವಿರ ಮೆಟ್ರಿಕ್ ಟನ್ ಮೆಕ್ಕಜೋಳ ಬೆಂಬಲ ಬೆಲೆ ಯೋಜನೆಯಡಿ ಖರೀದಿಸುವುದಾಗಿ ತಿಳಿಸಿದರು. ಕೃಷಿ ಇಲಾಖೆ ಜಂಟಿ ನಿರ್ದೇಶಕ ಜಿ.ಡಿ. ಕೃಷ್ಣಮೂರ್ತಿ, ಕೊಪ್ಪಳ ಕೃಷಿ ಮಾರಾಟ ಇಲಾಖೆಯ ಸಹಾಯಕ ನಿರ್ದೇಶಕ ವಿ.ಜಿ. ಹಿರೇಮಠ,ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕ ಡಾ. ಪಿ.ಎಂ. ಮಲ್ಲಯ್ಯ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಪಾಲ್ಗೊಂಡಿದ್ದರು.

# ವಿಜ್ರಂಭಣೆಯಿಂದ ಜರುಗಿದ ಶ್ರೀ ಗ್ರಾಮ ದೇವತೆ ಜಾತ್ರೆ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ:** ತಾಲ್ಲೂಕಿನ ಗುಂಡಕನಾಳ ಗ್ರಾಮದಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ ನಡೆಯುವ ಗ್ರಾಮದೇವತಾ ಜಾತ್ರಾ ಮಹೋತ್ಸವವು ಸಡಗರ ಸಂಭ್ರಮಗಳಿಂದ ಶುಕ್ರವಾರ ನೆರವೇರಿತು. ಗುರುವಾರ ರಾತ್ರಿ ಗಂಗಸ್ಥಳಕ್ಕೆ ಹೋಗಿ ಶುಕ್ರವಾರ ಬೆಳಿಗ್ಗೆ 6.00 ಗಂಟೆಗೆ ಮರಳಿತು. ಗ್ರಾಮದ ಅಗಸಿ ಮುಖ್ಯದ್ವಾರದಲ್ಲಿ ಗ್ರಾಮದ ಗೌಡರಾದ ಎಂ.ಜಿ.ಪಾಟೀಲ ಗುಂಡಕನಾಳ ಹಾಗೂ ಪರಿವಾರದವರು ಕುಂಬಳಕಾಯಿ ಒಡೆಯುವ ಮೂಲಕ ಗ್ರಾಮದೇವತೆಯನ್ನು ಸ್ವಾಗತಿಸಲಾಯಿತು.




ಗಂಗಸ್ಥಳದ ಮೆರವಣಿಗೆಯಲ್ಲಿ ಡೊಳ್ಳುಕುಣಿತ, ಕರಡಿ ಮಜಲು ಹಾಗೂ ಕುಂಭಮೇಳ ಗಮನ ಸೆಳೆದವು. ಗ್ರಾಮದೇವತೆ ದೇವಸ್ಥಾನದಲ್ಲಿ ಪಾದಗಟ್ಟೆಗೆ ಪ್ರತಿಷ್ಠಾಪಿತವಾದ ನಂತರ ಅರ್ಚಕರಾದ ಕಾಳಪ್ಪ ಬಡಿಗೇರ, ದೇವೀಂದ್ರ ಬಡಿಗೇರ, ಪ್ರಕಾಶ ಬಡಿಗೇರ, ದೇವೀಂದ್ರ ಪತ್ತಾರ ಅವರಿಂದ, ಸೀರೆ ಉಡಿಸಿ, ಮಡಿಲು ತುಂಬಿ, ಎಡ ಹಿಡಿದು ಕಾಯಿ, ಕರ್ಪೂರಗಳಿಂದ ಬೆಳಗಿ ಪೂಜಾಕಾರ್ಯ ಮಂಗಳಾರತಿ ನಡೆದವು. ಭಕ್ತಾದಿಗಳು ತಮ್ಮ ಭಕ್ತಿ ಅರ್ಪಣೆ ಮಾಡಿದರು.

ಉತ್ಸವದಲ್ಲಿ ಪ್ರಮುಖರಾದ ಶಶಿಧರ ಹಿರೇಮಠ, ಮಲ್ಲನಗೌಡ ಲಕ್ಕುಂಡಿ, ರಾಜುಗೌಡ ಗುಂಡಕನಾಳ, ವಿಜಯಕುಮಾರ ಗಬಸಾವಳಗಿ, ನಿಂಗನಗೌಡ ಜಿ.ಪಾಟೀಲ, ಎಸ್.ಎಂ.ಸಾವರದ, ಯಂಕಣ್ಣ ಬಿರಾದಾರ, ನಿಂಗನಗೌಡ ಪಾಟೀಲ, ಸಿದ್ದನಗೌಡ ಬಿರಾದಾರ, ಸುನಿಲ ಬಡಿಗೇರ ಇತರರು ಇದ್ದರು.

# ಕ್ರೀಡಾ ಮನೋಭಾವದೊಂದಿಗೆ ಆಟವಾಡಿ: ಅಧ್ಯಕ್ಷ ಹಿರೇಮಠ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಕ್ರೀಡೆಗಳಿಗೆ ಹೆಸರುವಾಸಿಯಾದ ಪಟ್ಟಣವಾಗಿದೆ. ಇಲ್ಲಿ ಎಲ್ಲ ಕ್ರೀಡೆ ಹಾಗೂ ಕ್ರೀಡಾಪಟುಗಳಿಗೆ ಸಾಕಷ್ಟು ಪ್ರೋತ್ಸಾಹ ಹಾಗೂ ಸಹಕಾರವಿದೆ.ಈ ವಾಲಿಬಾಲ್ ಪಂದ್ಯಾವಳಿಯಿಂದ ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರೀಡಾಪಟುಗಳು ಹೊರಹೊಮ್ಮಿ ಅದು ನಮ್ಮ ಪಟ್ಟಣದ ಕೀರ್ತಿಯನ್ನು ಹೆಚ್ಚಿಸಲಿ ಎಂದು ವಿವಿ ಸಂಘದ ಚೇರ್ಮನ್ ವಿ.ಸಿ.ಹಿರೇಮಠ ಹೇಳಿದರು.**

ಪಟ್ಟಣದ ಎಸ್ ಕೆ ಪಿಯು ಕಾಲೇಜ್ ಮೈದಾನದಲ್ಲಿ ತಾಳಿಕೋಟಿ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಹಮ್ಮಿಕೊಂಡ ಎರಡು ದಿನಗಳ ತಾಳಿಕೋಟಿ ವಾಲಿಬಾಲ್ ಪ್ರೀಮಿಯರ್ ಲೀಗ್ ಸೀಷನ್-2 ಪಂದ್ಯಾವಳಿಯನ್ನು ಉದ್ಘಾಟಿಸಿ ಶನಿವಾರ ಅವರು ಮಾತನಾಡಿದರು. ವಿ.ವಿ.ಸಂಘದ ವತಿಯಿಂದ ದಕ್ಷಿಣ ಭಾರತದ ವಿಶ್ವವಿದ್ಯಾಲಯಗಳ ಮಟ್ಟದ ವಾಲಿಬಾಲ್ ಪಂದ್ಯಾವಳಿಯನ್ನು ಸಂಘಟಿಸಲು ಪ್ರಯತ್ನಿಸಲಾಗುತ್ತಿದೆ ಇದಕ್ಕೆ ಅನುಮತಿ ಸಿಕ್ಕಲ್ಲಿ ಇದರ ಯಶಸ್ವಿಗೆ ನಿಮ್ಮೆಲ್ಲರ ಸಹಕಾರ ಇರಲಿ ಎಂದರು. ವಿ.ವಿ.ಸಂಘದ ಸಹ ಕಾರ್ಯದರ್ಶಿ ಕಾಶಿನಾಥ ಮುರಾಳ ಮಾತನಾಡಿ ಈ ಪಂದ್ಯಾವಳಿಯಲ್ಲಿ ಭಾಗವಹಿಸಿದ ಎಲ್ಲ ಕ್ರೀಡಾಪಟುಗಳು ಕ್ರೀಡಾ ಮನೋಭಾವದೊಂದಿಗೆ ಆಟವಾಡಲು ಪ್ರಯತ್ನಿಸಬೇಕು ನಿರ್ಣಾಯಕರ ನಿರ್ಣಯಗಳನ್ನು ಗೌರವಿಸಬೇಕು ಯಾವುದೇ ರೀತಿಯ ವಾದ ವಿವಾದಗಳಿಗೆ ಅವಕಾಶ ಮಾಡಿಕೊಡಬಾರದು.



ವಿವಿ ಸಂಘವು ಸದಾ ಆಟಗಾರರಿಗೆ ಪ್ರೋತ್ಸಾಹಿಸುವ ಕಾರ್ಯವನ್ನು ಮಾಡುತ್ತಾ ಬಂದಿದೆ ಎಂದರು. ನಿವೃತ್ತ ದೈಹಿಕ ಶಿಕ್ಷಣಾಧಿಕಾರಿ ಡಿ.ಬಿ. ಹೆಬ್ಬಾಳ, ಹಿರಿಯ ವಾಲಿಬಾಲ್ ಕ್ರೀಡಾಪಟು ಮಹೇಶ ಚಲವಾದಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ತಾಳಿಕೋಟಿ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ರವೀಂದ್ರ ಕಟ್ಟಿಮನಿ ಮಾತನಾಡಿ ಪಟ್ಟಣದಲ್ಲಿ ಎರಡನೇ ಬಾರಿಗೆ ಈ ಪಂದ್ಯಾವಳಿಯನ್ನು ಆಯೋಜಿಸಲಾಗುತ್ತಿದ್ದು ಇದಕ್ಕೆ ವಿ.ವಿ. ಸಂಘದ ಅಧ್ಯಕ್ಷರು ಹಾಗೂ ಎಲ್ಲ ಪದಾಧಿಕಾರಿಗಳು ವಿಶೇಷವಾಗಿ ಪಟ್ಟಣದ ವಾಲಿಬಾಲ್ ಹಿರಿಯ ಆಟಗಾರರ ಸಂಪೂರ್ಣ ಸಹಕಾರ ಮಾರ್ಗದರ್ಶನ ನಮ್ಮೊಂದಿಗೆ ಇದೆ ನಾನು ಕ್ಲಬ್ ವತಿಯಿಂದ ಅವರಿಗೆ ಅಭಿನಂದಿಸುತ್ತೇನೆ.

ಮುಂದಿನ ದಿನಗಳಲ್ಲಿ ಇಲ್ಲಿ ರಾಷ್ಟ್ರಮಟ್ಟದ ವಾಲಿಬಾಲ್ ಆಟಗಾರರ ಒಂದು ಪಂದ್ಯಾವಳಿ ನಡೆಯಬೇಕೆಂದು ಅವರ ಆಸೆಯಾಗಿದೆ ಅದನ್ನು ಕಾರ್ಯರೂಪಕ್ಕೆ ತರಲು ನಾವೆಲ್ಲರೂ ಅವರೊಂದಿಗೆ ಸಹಕರಿಸುತ್ತೇವೆ ಎಂದು ತಿಳಿಸಿದರು. ಎರಡು ದಿನಗಳ ಕಾಲ ನಡೆಯುವ ಈ ಪಂದ್ಯಾವಳಿಯಲ್ಲಿ ಒಟ್ಟು 8 ತಂಡಗಳು ಭಾಗವಹಿಸಿವೆ. ಉದ್ಘಾಟನಾ ಸಮಾರಂಭದಲ್ಲಿ ವಿವಿ ಸಂಘದ ಕಾರ್ಯದರ್ಶಿ ಎಂ ಎಸ್ ಸರಶೆಟ್ಟಿ, ಸಹಕಾರಿ ಬ್ಯಾಂಕ್ ಅಧ್ಯಕ್ಷ ಕಾಶಿನಾಥ ಸಜ್ಜನ, ಎಸ್ಕೆ ಪಿಯು ಕಾಲೇಜ್ ಅಧ್ಯಕ್ಷ ಎಂ.ಆರ್. ಕತ್ತಿ, ಎಸ್ ಕೆ ಪ್ರೌಢಶಾಲೆ ಅಧ್ಯಕ್ಷ ಮಹಾಂತೇಶ್ ಕತ್ತಿ, ಎಸ್ ಕೆ ಬಾಲಕಿರ ಪ್ರೌಢಶಾಲೆ ಅಧ್ಯಕ್ಷ ಐಬಿ ಬಿಳೆಭಾವಿ, ನಿವೃತ್ತ ದೈಹಿಕ ಶಿಕ್ಷಕ ಅಶೋಕ ಬಿರಾದಾರ, ಡಾ.ನಜೀರ ಕೋಳ್ಯಾಳ, ಡಾ.ಅನೀಲಕುಮಾರ ಇರಾಜ, ನಿರಂಜನಶಾ ಮಕಾನದಾರ,ಫಯಾಜ್ ಉತ್ನಾಳ, ಸಂಜೀವ ಹಜೇರಿ, ಪರಶುರಾಮ ಕಟ್ಟಿಮನಿ, ಕಳಕೂಸ ರಂಗರೇಜ, ಸಂಜು ಹಜೇರಿ, ರಾಘು ಮಾನೆ, ನಬಿ ರಸೂಲ್ ನಾಯ್ಕೋಡಿ, ನೀಲಕಂಠ ಕೊಣ್ಣೂರ, ವೀರೇಶ್ ಗದಗ, ರಾಮನಗೌಡ ದದ್ದಲ, ಶೌಕತ್ ನಾಲಬಂದ, ಈಶ್ವರ್ ಹೂಗಾರ, ಸೌರಭ ಕುಲಕರ್ಣಿ, ಮಲ್ಲನಗೌಡ ಪಾಟೀಲ, ನೂರ ಬಿಸ್ತಿ, ಲಾಲಸಾಬ ಅಸ್ಕಿ, ವಿಜಯ ಬೊಮ್ಮನಹಳ್ಳಿ ಹಾಗೂ ಕ್ರೀಡಾಪಟುಗಳು ಇದ್ದರು.